(ಸದನವು ಕಲಾಪವು ಬೆಳಿಗ್ಗೆ 10–18 ಗಂಟೆಗೆ ಪ್ರಾರಂಭವಾದಾಗ ಸನ್ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

1. ಹುಟ್ಟು ಹಬ್ಬದ ಶುಭಾಶಯಗಳು

ಅಧ್ಯಕ್ಷರು: ಈ ದಿವಸ ದಿನಾಂಕ: 04.07.2014 ರಂದು ಹುಟ್ಟು ಹಬ್ಬವನ್ನು ಆಚರಿಸಿಕೊಳ್ಳುತ್ತಿರುವ ಸದನದ ಮಾನ್ಯ ಸದಸ್ಯರಾದ ಶ್ರೀ ಎಂ. ಪಿ. ಅಪ್ಪಚ್ಚುರಂಜನ್‌ರವರಿಗೆ ಜನ್ಮ ದಿನದ ಶುಭಾಶಯಗಳು. ಈ ಸಂದರ್ಭದಲ್ಲಿ ಭಗವಂತನು ತಮಗೆ ಆಯುರಾರೋಗ್ಯ, ಐಶ್ವರ್ಯವನ್ನು ದಯಪಾಲಿಸಲಿ ಎಂದು ಹಾರೈಸುತ್ತೇನೆ.

ಈಗ ಪ್ರಶ್ನೋತ್ತರ :

2. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚೆಗೆ ಮನವಿ

ವಿಷಯ: ಸದಸ್ಯರಾದ ಮಾನ್ಯ ವಿಜಯಾನಂದ ಕಾಶಪ್ಪನವರ ಬಗ್ಗೆ:

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಕಾಶಪ್ಪನವರೆ, ಅವರ ವಿಚಾರವಾಗಿ ನಾನು ನಿನ್ನೆ Zero Hour ನಲ್ಲಿ ವಿಷಯವನ್ನು raise ಮಾಡಿದ್ದೆ, ಅಂದು ಮೊದಲು ಪ್ರಶ್ನೋತ್ತರ ಮುಗಿಯಲಿ, ತದನಂತರ ಇಲಾಖಾ ಅನುದಾನದ ಬೇಡಿಕೆಗಳ ಮೇಲಿನ ಚರ್ಚೆಗೆ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ, ಅದೆಲ್ಲಾ ಮುಗಿಯಲಿ ಎಂದು ತಾವು ಹೇಳಿದ್ದೀರಿ. ಅದಕ್ಕೆ ನಾವು ಸಹಕಾರ ಕೊಟ್ಟೆವು. ಸಾಯಂಕಾಲ ಮತ್ತೊಮ್ಮೆ ಇದನ್ನು raise ಮಾಡಿದಾಗ, ತಾವು ನಾಳೆ ಸರ್ಕಾರ ಈ ಬಗ್ಗೆ statement ಮಾಡುತ್ತದೆ. ನಾಳೆಯೇ ಈ ವಿಚಾರವನ್ನು ಪ್ರಸ್ತಾಪ ಮಾಡುವಿರಂತೆ, ನಾಳೆ ನಿಮಗೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ ಎಂದಿದ್ದಿರಿ.

ಅಧ್ಯಕ್ಷರು: ಹೌದು, ಹೇಳಿದ್ದೆ.

ಶ್ರೀ ಜಗದೀಶ್ ಶೆಟ್ಟರ್: ಆದರೆ ಸರ್ಕಾರ statement ಕೊಡುವುದನ್ನು delay ಮಾಡುತ್ತಿದೆ.

ಅಧ್ಯಕ್ಷರು: ಒಂದು ನಿಮಿಷ statement ಮಾಡುತ್ತೇವೆಂದು ಸರ್ಕಾರ ಹೇಳಿದೆ, ಅದನ್ನು ಸರ್ಕಾರ ಮಾಡುತ್ತದೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, 'ಶಾಸಕ ಕಾಶಪ್ಪನವರ್ ನಾಪತ್ತೆ' ಎಂಬ ಶೀರ್ಷಿಕೆಯಲ್ಲಿ ಪತ್ರಿಕೆಯ ಮುಖಪುಟದಲ್ಲಿ ವರದಿ ಪ್ರಕಟ ವಾಗಿದೆ. ಈ ರೀತಿಯಾಗಿ ಇವತ್ತು ಈ ಸದನ ನಡೆಯುತ್ತಿರುವಾಗ, ಜವಾಬ್ದಾರಿ ಸ್ಥಾನದಲ್ಲಿರುವ ಶಾಸಕರು, ಜನಪ್ರತಿನಿಧಿಯೊಬ್ಬರು ನಾಪತ್ತೆಯಾದರೆ ಹೇಗೆ?

ಅಧ್ಯಕ್ಷರು: ಆ ಭಾಗವನ್ನು ತಾವು ಪ್ರಸ್ತಾಪಿಸುವ ವಿಷಯದಿಂದ ಬಿಟ್ಟು ಬಿಡಿ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರು ತಪ್ಪೇನೂ ಮಾಡಿಲ್ಲ ಎನ್ನುವುದಾದರೆ ಅವರು ಧೈರ್ಯವಿದ್ದಿದ್ದರೆ ಇಂದು ಸದನಕ್ಕೆ ಹಾಜರಾಗಿ ಇಲ್ಲಿ ಕುಳಿತುಕೊಳ್ಳಬೇಕಾಗಿತ್ತು. ಅಲ್ಲಿ ಪೊಲೀಸರು ಅವ ರನ್ನು arrest ಮಾಡಲಿಕ್ಕೆ ಓಡಾಡುತ್ತಿದ್ದಾರೆ. ಆದರೆ ಇವರು ಇಲ್ಲಿ ನಾಪತ್ತೆ ಯಾಗಿದ್ದಾರೆ. ಆ ರೀತಿಯ ತಪ್ಪು ಮಾಡಿರುವುದರಿಂದಲೇ ಅವರು ಸದನಕ್ಕೆ ಬಂದಿಲ್ಲ. Anticipatory bail ಸಲ್ಲಿಸುವ ಪ್ರಯತ್ನಗಳೂ ಸಹ ಆಗಿವೆ.

ಅಧ್ಯಕ್ಷರು: ತಾವು ಆ ಭಾಗಕ್ಕೆ ಹೋಗಬೇಡಿ.

ಶ್ರೀ ಜಗದೀಶ್ ಶೆಟ್ಟರ್ : ಸದನದ ಸದಸ್ಯರಾದ ಅವರು ನಾಪತ್ತೆ ಯಾಗಿರುವುದರಿಂದ, ಅವರ ಮೇಲೆ ಎಲ್ಲರಿಗೂ ಇವತ್ತು ಆ ರೀತಿ ತಪ್ಪು ಮಾಡಿರಬಹುದು ಎಂಬ ಭಾವನೆ ಮೂಡಲಿಕ್ಕೆ ಶುರುವಾಗಿದೆ. ಈ ಬಗ್ಗೆ public ನಲ್ಲಿ ಚರ್ಚೆಯಾಗುತ್ತಿದೆ. ಶಾಸಕರೊಬ್ಬರು, ಜನಪ್ರತಿನಿಧಿಯೊಬ್ಬರು ಇವತ್ತು ಪೊಲೀಸರ ಮೇಲೆ ಹಲ್ಲೆ ಮಾಡುವಂತಹ ಮಟ್ಟಕ್ಕೆ ಹೋಗುವಂತಾ ದರೆ, ಸಾಮಾನ್ಯ ಜನರ ರಕ್ಷಣೆ ಮಾಡುವವರು ಯಾರು? ಇವತ್ತು ಆ ರೀತಿ ಒಬ್ಬರು ಮಾಡಿದರೆ, ನಾಳೆ ಇನ್ನೊಬ್ಬರು ಮಾಡಬಹುದು. ಈ ಪೊಲೀಸ್

ಡಿಪಾರ್ಟಮೆಂಟ್‌ಅನ್ನೇ ತೆಗೆದು ಹಾಕಿಬಿಡಿ ಎಂದು ಪ್ರತಿಯೊಂದರಲ್ಲಿ ವರದಿ ಪ್ರಕಟವಾಗಿದೆ. ಇಂತಹ ಸಂದರ್ಭದಲ್ಲಿ ಕೆಳಹಂತದ ಪೊಲೀಸ್ ಅಧಿಕಾರಿಗಳು ಕೆಲಸ ಮಾಡುವಂತಹ ಪರಿಸ್ಥಿತಿಯಲ್ಲೂ ಸಹ demoralize ಆಗುತ್ತಾರೆ. ಕರ್ತವ್ಯ ನಿರ್ವಹಿಸುವ ಅವರ ನೈತಿಕತೆಯೇ ಹೋಗುತ್ತದೆ.

ಅಧ್ಯಕ್ಷರು : ಆಯಿತು.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಸದನದ ಶಾಸಕರ custody ತಮ್ಮ ಜವಾಬ್ದಾರಿಯಾಗಿದೆ. ಅವರು ಈ ಸದನದ ಶಾಸಕರು. ಆದರೆ ಇಲ್ಲಿ ಸದನದ ಶಾಸಕರೊಬ್ಬರು ಕಳೆದು ಹೋಗಿದ್ದಾರೆಂದರೆ, ಈ ಬಗ್ಗೆ ನೀವೇ ತನಿಖೆಗೆ ಆದೇಶಿಸಬೇಕಾಗುತ್ತದೆ.

ಅಧ್ಯಕ್ಷರು: ಅಂತಹ ಸನ್ನಿವೇಶ ನಿರ್ಮಾಣವಾಗಿಲ್ಲ. ಸುಮ್ಮನೆ ಊಹಾ ಪೋಹದ ಮೇಲೆ ಏನೇನೋ ಮಾತನಾಡಲು ಹೋಗಬೇಡಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಹಾಗಾದರೆ ಶಾಸಕರು ಎಲ್ಲಿಗೆ ಹೋಗಿದ್ದಾರೆ? ಅಧಿವೇಶನ ನಡೆಯುತ್ತಿರುವಾಗ ತಮ್ಮ ಅನುಮತಿ ಇಲ್ಲದೆ ಬೆಂಗಳೂರು ಬಿಟ್ಟು ಅವರು ಎಲ್ಲಿ ಹೋಗಿದ್ದಾರೆ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಈ ಸರ್ಕಾರ ರಾತ್ರಿ ಒಂದು ಗಂಟೆಯವರೆಗೂ ಬಾರ್‌ಗಳನ್ನು ಓಪನ್ ಮಾಡಲು permission ಕೊಟ್ಟಿತು. ಆ ಸಂದರ್ಭದಲ್ಲಿ ನಾವು ಇದರಿಂದ ತೊಂದರೆಯಾಗುತ್ತದೆ, ಕಾನೂನು ಸುವ್ಯವಸ್ಥೆ ಹದಗೆಡುತ್ತದೆ ಎಂದು ಹೇಳಿದ್ದೆವು. ಇವತ್ತು ರಾತ್ರಿ 1.30 ಗಂಟೆಯವರೆಗೂ ಒಬ್ಬ ಶಾಸಕರು ಬಾರ್‌ನಲ್ಲಿರುತ್ತಾರೆ. ಅವರ ಜೊತೆಗೆ ಗೂಂಡಾ ಲಿಸ್ಟ್‌ನಲ್ಲಿರುವಂತಹ ವ್ಯಕ್ತಿಗಳೂ ಇರುತ್ತಾರೆ. ಅವರ ನೆರವಿನಿಂದ ಆ ಪೊಲೀಸರನ್ನು ಎಲ್ಲರೂ ಅಟ್ಟಾಡಿಸಿ ಹೊಡೆದಿದ್ದಾರೆ. ಇವತ್ತು ಪತ್ರಿಕೆಯಲ್ಲಿ ಪ್ರಕಟಿಸಿರುವಂತಹ

ವರದಿಗಳನ್ನು ನೋಡಿದರೆ ಇದು ಗೊತ್ತಾಗುತ್ತದೆ. ಆ ಪೊಲೀಸರನ್ನು ಮಹಡಿಯ ಮೇಲಿನಿಂದ ಕೆಳಗಿನವರೆಗೆ ಅಟ್ಟಾಡಿಸಿ, ಓಡಾಡಿಸಿಕೊಂಡು ಹೊಡೆಯುತ್ತಾರೆ ಎಂದರೆ ಹೇಗೆ? ರೌಡಿ ಲಿಸ್ಟ್‌ನಲ್ಲಿರುವವರು ಪೊಲೀಸರ ಮೇಲೆ ಕೈ ಮಾಡುತ್ತಾರೆಂದರೆ ಹೇಗೆ? ಯಾರ ಮೇಲೆ ನೀವು action ತೆಗೆದು ಕೊಂಡಿದ್ದೀರಿ?

(ಗೊಂದಲ)

ಅಧ್ಯಕ್ಷರು: ಯಾರಾದರೂ ಒಬ್ಬರು ಮಾತನಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಸದನದಲ್ಲಿ ಮಾನ್ಯ ಗೃಹ ಸಚಿವರು ಇಲ್ಲ, ಮಾನ್ಯ ಮುಖ್ಯಮಂತ್ರಿಗಳು ಇಲ್ಲ, ಕಾನೂನು ಸಚಿವರೂ ಸಹ ಇಲ್ಲ. ಅವರೆಲ್ಲಾ ಎಲ್ಲಿಗೆ ಹೋಗಿದ್ದಾರೆ? ಅಪಾದಿತ ಶಾಸಕರನ್ನು ರಕ್ಷಿಸಲು ಎಲ್ಲರೂ ಒಳ ಪ್ರಯತ್ನ ಮಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು: ಎಲ್ಲರೂ ಇದ್ದಾರೆ, ಬರುತ್ತಾರೆ.

(ಗೊಂದಲ)

ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್ : ಮಾನ್ಯ ಗೃಹ ಸಚಿವರು ಮತ್ತು ಮಾನ್ಯ ಮುಖ್ಯಮಂತ್ರಿಗಳು ಎಲ್ಲಿಗೆ ಹೋಗಿದ್ದಾರೆಂದು ಕೇಳುತ್ತಿದ್ದೀರಿ. ಅವರೆಲ್ಲಿ ಹೋಗುತ್ತಾರೆ? ಅವರು ಸದನಕ್ಕೆ ಬರುತ್ತಾರೆ. ಪ್ರಶ್ನೋತ್ತರ ಮುಗಿದ ಮೇಲೆ, ಅದರ ಬಗ್ಗೆ ಹೇಳಿಕೆ ನೀಡುವುದಕ್ಕೆ ಮಾನ್ಯ ಗೃಹ ಸಚಿವರು ಬರುತ್ತಾರೆ. ಅಲ್ಲಿಯವರೆಗೂ ತಾಳ್ಮೆಯಿಂದ ಕಾಯಿರಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ನಾವು ಸದನದ ಬಾವಿಯಲ್ಲಿ ಧರಣಿ ಮಾಡುತ್ತೇವೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಅಪರಾಧಿಗಳನ್ನು ರಕ್ಷಿಸುವಂತಹ ಕೆಲಸ ಮಾಡುತ್ತಿದ್ದೀರಿ.

(ಗೊಂದಲ)

(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್ ಅವರನ್ನು ಹೊರತುಪಡಿಸಿ ಭಾರತೀಯ ಜನತಾ ಪಕ್ಷದ ಸದಸ್ಯರುಗಳು ಸದನದ ಬಾವಿಯಲ್ಲಿ ಧರಣಿ ನಿರತರಾದರು)

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ನಾವು ನಿಮಗೆ ನಿನ್ನೆಯೂ ಕೂಡ ಸಹಕಾರ ಕೊಟ್ಟಿದ್ದೆವು.

(ಗೊಂದಲ)

ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್ : ಪ್ರಶ್ನೋತ್ತರ ಮುಗಿದ ಮೇಲೆ statement ಮಾಡುತ್ತಾರೆ ಬಿಡಿ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಗೃಹ ಸಚಿವರು ಸದನಕ್ಕೆ ಬಂದ ಮೇಲೆ ಅದರ ಬಗ್ಗೆ statement ಮಾಡುತ್ತಾರೆ.

(ಗೊಂದಲ)

ಅಧ್ಯಕ್ಷರು: ಈಗ ಸರ್ಕಾರದಿಂದ ಹೇಳುತ್ತಾರೆ ಇರಿ.

(ಗೊಂದಲ)

ಶ್ರೀ ಶ್ರೀನಿವಾಸ್ ಪ್ರಸಾದ್ : ಸರ್ಕಾರ ಈ ಬಗ್ಗೆ ಸದನದ ಮಾನ್ಯ ಸದಸ್ಯರಿಗೆ ಹೇಳಬಯಸುವುದೇನೆಂದರೆ, ಇಲ್ಲಿ ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ. ಸರ್ಕಾರ ಈ ಘಟನೆ ಬಗ್ಗೆ ಕ್ರಮ ತೆಗೆದುಕೊಂಡಿದೆ. ಈಗಾಗಲೇ ಘಟನೆ ಸಂಬಂಧ FIR ದಾಖಲಾಗಿದೆ. . . . .

(ಗೊಂದಲ)

ಅಧ್ಯಕ್ಷರು: ದಯವಿಟ್ಟು ಸುಮ್ಮನೆ ಊಹಾಪೋಹ ಮಾಡುವುದಕ್ಕೆ ಹೋಗಬೇಡಿ. ಇಲ್ಲಿ ಯಾರನ್ನೋ ರಕ್ಷಣೆ ಮಾಡಬೇಕು, ಇನ್ನೊಂದು ಏನೋ ಮಾಡಬೇಕು ಎನ್ನುವುದೇನೂ ಇಲ್ಲ. ಇದನ್ನು ಇಲ್ಲಿಗೆ ಬಿಟ್ಟುಬಿಟಿ. ಸರ್ಕಾರದವರು ಈ ಬಗ್ಗೆ ಹೇಳಿಕೆ ಮಾಡಿದ ಮೇಲೆ ಮಾತನಾಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಗೃಹ ಸಚಿವರು ಬರುವವರೆಗೆ ಸದನವನ್ನು ಮುಂದೂಡಿ, ಅವರು ಬರುವ ವರೆಗೆ wait ಮಾಡುತ್ತೇವೆ.

ಅಧ್ಯಕ್ಷರು: ನಾನು ಆ ರೀತಿ ಮಾಡಲಿಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಇವತ್ತು ಅಪರಾಧಿಗಳಿಗೆ ರಕ್ಷಣೆ ಮಾಡು ವಂಥಾದ್ದು ಆಗುತ್ತಿದೆ.

(ಗೊಂದಲ)

ಅಧ್ಯಕ್ಷರು: ವಾಸ್ತವಿಕವಾಗಿ ಹೇಳುವುದಾದರೆ, after Question Hour, Zero Hour ಬರುತ್ತದೆ. ಆದರೆ ಈಗ ಇಲ್ಲಿ ಇನ್ನೂ Question Hour ಪ್ರಾರಂಭ ವಾಗಿಯೇ ಇಲ್ಲ, ವಾಸ್ತವಿಕವಾಗಿ ಪ್ರಶ್ನೋತ್ತರವಾದ ನಂತರ ಇತರ ವಿಷಯ ಗಳನ್ನು ಪ್ರಸ್ತಾಪಿಸಬೇಕು. ನಾನು ನಿಮಗೋಸ್ಕರವಾಗಿ ನಿನ್ನೆ ಪ್ರಸ್ತಾಪ ಮಾಡಲು ಅವಕಾಶ ಕೊಟ್ಟಿದ್ದೆ. ಪದೇ ಪದೇ ಅದನ್ನು mis-use ಮಾಡಿಕೊಳ್ಳುವುದಕ್ಕೆ ಪ್ರಯತ್ನ ಪಡಬೇಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಇದು ಮಹತ್ವದ ವಿಚಾರವಾಗಿದ್ದರಿಂದ, ತಾವು Zero Hour ನಲ್ಲಿ ಪ್ರಸ್ತಾಪಿಸಲು allow ಮಾಡಿದ್ದಿರಿ. ಆದ್ದರಿಂದ ನಾನು

ಇದನ್ನು ನಿನ್ನೆ ಪ್ರಸ್ತಾಪಿಸಿದ್ದೆ. ಆದರೆ ಸರ್ಕಾರ ಇದನ್ನು ದುರುಪಯೋಗಪಡಿಸಿಕೊಳ್ಳುತ್ತಿದೆ.

(ಗೊಂದಲ)

ಅಧ್ಯಕ್ಷರು: ಈಗಾಗಲೇ ಅರ್ಧ ಗಂಟೆ ಸಮಯ ವ್ಯರ್ಥವಾಯಿತು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಇದೊಂದು ಗಂಭೀರವಾದ ವಿಚಾರವಾಗಿದೆ. ಸರ್ಕಾರ ಇದನ್ನು serious ಆಗಿ ತೆಗೆದುಕೊಳ್ಳಬೇಕಾಗಿತ್ತು.

(ಗೊಂದಲ)

ಅಧ್ಯಕ್ಷರು: ಸದನವನ್ನು ಮುಂದೂಡುವುದು ಸಾಧ್ಯವೇ ಇಲ್ಲ. ಸದನ ಮುಂದೂಡುವ ಸಾಧ್ಯತೆಯನ್ನು ನೀವು ಬಿಟ್ಟುಬಿಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ತಾವು ಒಳ್ಳೆಯವರಿದ್ದೀರಿ, ತಮ್ಮ ಒಳ್ಳೆಯತನವನ್ನು ಈ ಸರ್ಕಾರ ದುರುಪಯೋಗಪಡಿಸಿಕೊಳ್ಳುತ್ತಿದೆ.

(ಗೊಂದಲ)

ಅಧ್ಯಕ್ಷರು: ವಾಸ್ತವಿಕವಾಗಿ Question Hour ಆದಮೇಲೆ Zero Hour ಬರುತ್ತದೆ ಎನ್ನತಕ್ಕಂಥ ಕಲ್ಪನೆ ಇದೆ. ಆ ಕಾರಣಕ್ಕಾಗಿ ಸ್ವಲ್ಪ ತಡವಾಗಿದೆ. ಸುಮ್ಮನೆ ಸದನ ಮುಂದೂಡುವುದು ಸರಿಯಲ್ಲ. ಈಗ ಅಂತಹದ್ದೇನೂ ಇಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ನಿನ್ನೆ ತಮ್ಮ request ಗೆ ಗೌರವ ಕೊಟ್ಟು, ನಾವು ಇಡೀ ದಿವಸ ವೆಲ್‌ಗೆ ಬರಲಿಲ್ಲ. ಆದರೂ ಕೂಡ ಈ ಸರ್ಕಾರ ಸ್ಪಂದನೆ ಮಾಡಲಿಕ್ಕೆ ತಯಾರಿಲ್ಲ.

(ಗೊಂದಲ)

ಅಧ್ಯಕ್ಷರು: ನೀವು ವಿರೋಧ ಪಕ್ಷದ ನಾಯಕರಾಗಿದ್ದರಿಂದ, ನಿಮಗೆ ಗೌರವ ಕೊಟ್ಟು ನಿನ್ನೆ ನಿಮಗೆ ವಿಷಯವನ್ನು ಪ್ರಸ್ತಾಪಿಸಲು ಅವಕಾಶ ಕೊಟ್ಟಿದ್ದೆ. ಆದರೆ ವಾಸ್ತವಿಕವಾಗಿ Question Hour ಆದ ಮೇಲೆಯೇ Zero Hour ನಲ್ಲಿ ವಿಷಯ ಪ್ರಸ್ತಾಪಿಸಲು ಅವಕಾಶ ಕೊಡಬೇಕು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ತಾವು ಒಳ್ಳೆಯವರಿದ್ದೀರಿ. ತಮ್ಮ ಒಳ್ಳೆಯತನವನ್ನು ಸರ್ಕಾರ ದುರುಪಯೋಗ ಮಾಡಿಕೊಳ್ಳುತ್ತಿದೆ. ಈ ಸರ್ಕಾರಕ್ಕೆ ಯಾವುದೇ ತರಹದ seriousness ಇಲ್ಲ.

(ಗೊಂದಲ)

ಅಧ್ಯಕ್ಷರು: ಬೇಗ ಬಂದು ಉತ್ತರ ಕೊಡುವ ಕೆಲಸವಾಗಬೇಕು.

(ಗೊಂದಲ)

ಶ್ರೀ ಕೃಷ್ಣ ಭೈರೇಗೌಡ: ಮಾನ್ಯ ಅಧ್ಯಕ್ಷರೆ, ಇವರ ಸರ್ಕಾರ ಐದು ವರ್ಷ ಅಧಿಕಾರದಲ್ಲಿದ್ದಾಗ, ಒಂದು ದಿವಸವೂ ಇವರು...

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಮಹಾದೇವಪ್ಪನವರೆ, ಸರ್ಕಾರದ ವತಿಯಿಂದ ಬೇಗ ಉತ್ತರ ಕೊಡಿ.

(ಗೊಂದಲ)

ಶ್ರೀ ಡಿ. ಕೆ. ಶಿವಕುಮಾರ್: ನಾವು ಉತ್ತರ ಕೊಡುತ್ತೇವೆ ಎಂದು ನಿನ್ನೆಯೂ ಸಹ ಹೇಳಿದ್ದೇವೆ. ಉತ್ತರ ಕೊಡುತ್ತೇವೆ. ನಾವು ಉತ್ತರ ಕೊಡದೆ ಓಡಿ ಹೋಗುವುದಿಲ್ಲ. ಆ ಉತ್ತರವನ್ನು ಈಗಲೇ ಕೊಡಬೇಕೆಂದೇನೂ ಇಲ್ಲ.

(ಗೊಂದಲ)

ಅಧ್ಯಕ್ಷರು: ಮಾನ್ಯ ಗೃಹ ಸಚಿವರು ಸದನಕ್ಕೆ ಬಂದಿದ್ದಾರೆ.

(ಗೊಂದಲ)

ಅಧ್ಯಕ್ಷರು: ನೀವು ನಿಮ್ಮ ನಿಮ್ಮ ಸ್ಥಳಗಳಿಗೆ ಹೋಗುತ್ತೀರೋ, ಇಲ್ಲವೋ?

(ಗೊಂದಲ)

ಶ್ರೀ ಕೃಷ್ಣ ಭೈರೇಗೌಡ : ಇವರು 5 ವರ್ಷಗಳಿಂದ ಸರಿಯಾಗಿ ಸದನ ನಡೆಸಲಿಲ್ಲ. ನಾವು ಸದನವನ್ನು ನಡೆಸುತ್ತಿದ್ದೇವೆ. ಆದರೆ ಇವರಿಗೆ ಸದನದ ಕಾರ್ಯಕಲಾಪಗಳನ್ನು ನಡೆಸಬೇಕೆಂಬ ಇಚ್ಛೆ ಇದ್ದಂತಿಲ್ಲ. ವಿಚಾರ ಚರ್ಚೆ ಮಾಡುವುದಕ್ಕೆ ಇವರಿಗೆ ಇಷ್ಟವಿಲ್ಲ. ಇವರಿಗೆ ಗದ್ದಲ ಮಾಡಬೇಕೆನ್ನುವುದು ಬಿಟ್ಟರೆ ಮತ್ತೇನೂ ಇಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಅಪರಾಧಿಗಳನ್ನು ರಕ್ಷಣೆ ಮಾಡುತ್ತಿದ್ದೀರಿ. ಅವರನ್ನು ಮುಚ್ಚಿಟ್ಟಿದ್ದೀರಿ. ಅವರನ್ನು ರಕ್ಷಣೆ ಮಾಡುತ್ತಿದ್ದಾರೆ. ಅವರನ್ನು arrest ಮಾಡುವುದಕ್ಕೆ ತಯಾರಿಲ್ಲ.

(ಗೊಂದಲ)

ಶ್ರೀ ಡಿ. ಕೆ. ಶಿವಕುಮಾರ್: ಐದು ವರ್ಷಗಳ ಕಾಲ ನೀವು ಸರಿಯಾಗಿ Assembly ಯನ್ನೇ ನಡೆಸಿಲ್ಲ.

(ಗೊಂದಲ)

ಶ್ರೀ ಕೃಷ್ಣ ಭೈರೇಗೌಡ: ಸದನದಲ್ಲಿ ಚರ್ಚೆ ನಡೆಸುವುದಕ್ಕೆ ಇವರು ಬಿಡುತ್ತಿಲ್ಲ. ಸದನ ನಡೆಸುವುದಕ್ಕೆ ಇವರು ಅಡ್ಡಿಪಡಿಸುತ್ತಿದ್ದಾರೆ.

(ಗೊಂದಲ)

ಶ್ರೀ ಡಿ. ಕೆ. ಕುಮಾರ್: After Question Hour Zero Hour ಬರುತ್ತದೆ. ನೀವು ಹೇಳಿದಂತೆ ಕೇಳುವುದಕ್ಕಾಗುವುದಿಲ್ಲ. ಈಗಲೇ ಉತ್ತರ ಕೊಡಬೇಕೆಂದೇನೂ ಇಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ನೀವು ಹೇಳಿದಂತೆ ನಾವೂ ಕೂಡ ಕೇಳುವುದಕ್ಕಾಗುವುದಿಲ್ಲ.

(ಗೊಂದಲ)

(ಈ ಹಂತದಲ್ಲಿ ಮಾನ್ಯ ಜಗದೀಶ್ ಶೆಟ್ಟರ್‌ರವರೂ ಸಹ ಸದನದ ಬಾವಿಗೆ ತೆರಳಿ ಧರಣಿಯಲ್ಲಿ ನಿರತರಾದರು)

ಶ್ರೀ ಡಿ. ಕೆ. ಶಿವಕುಮಾರ್ : Question Hour ನಿಮಗೆ important ಅಲ್ಲವೇ?

(ಗೊಂದಲ)

ಅಧ್ಯಕ್ಷರು: ಗೂಂಡಾಗಿರಿ ಮಾಡುತ್ತಾರೆ ಎಂದೆಲ್ಲಾ ಇಲ್ಲಿ ಹೇಳುವುದಕ್ಕೆ ಹೋಗಬೇಡಿ.

(ಗೊಂದಲ)

ಶ್ರೀ ಕೆ. ಗೋಪಾಲ ಪೂಜಾರಿ : ಅವತ್ತು ಸದನದಲ್ಲಿ ನಿಮ್ಮ ಸದಸ್ಯರು blue film ನೋಡಿದ್ದರಲ್ಲಾ? ಅವರಿಗೆ ನೀವು ಏನು ಮಾಡಿದಿರಿ?

(ಗೊಂದಲ)

ಅಧ್ಯಕ್ಷರು: ಕುಳಿತುಕೊಳ್ಳಿ ಸಾಕು.

(ಗೊಂದಲ)

(ಈ ಹಂತದಲ್ಲಿ ಮಾನ್ಯ ಜಗದೀಶ್ ಶೆಟ್ಟರ್‌ರವರು ಸದನದ ಬಾವಿಯಿಂದ ಪುನಃ ತಮ್ಮ ಸ್ಥಾನಕ್ಕೆ ತೆರಳಿದರು)

(ಗೊಂದಲ)

ಶ್ರೀ ಕೆ. ಆರ್. ರಮೇಶ್‌ಕುಮಾರ್ (ಶ್ರೀನಿವಾಸಪುರ) : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ವಿನಂತಿ ಮಾಡುತ್ತೇನೆ.

ನಾನೇನು ಸರ್ಕಾರದ ಪರವಾಗಿ ವಕಾಲತ್ತು ಹಾಕುವುದಕ್ಕೆ ನಿಂತಿಲ್ಲ. ಒಬ್ಬ ಸದಸ್ಯರು ಎಲ್ಲೋ ಒಂದು ಕಡೆ ನಡೆದುಕೊಳ್ಳಬಾರದ ರೀತಿಯಲ್ಲಿ ನಡೆದು ಕೊಂಡಿದ್ದಾರೆಂಬ ವಿಚಾರ ಈ ಸದನದ ಸದಸ್ಯರಿಗೆ ಗೌರವ ತರುವಂತಹದ್ದಲ್ಲ. ಸಾರ್ವಜನಿಕರಲ್ಲಿ ನಮ್ಮ ಗೌರವ ಹೆಚ್ಚಿಸುವುದಿಲ್ಲ. ಆ ವಿಚಾರವನ್ನು ಚರ್ಚೆ ಮಾಡಬೇಕಾಗಿರುವುದು ಹೌದು. ನಾನು ತಮ್ಮಲ್ಲಿ ಏನು ವಿನಂತಿ ಮಾಡುತ್ತೇನೆಂದರೆ, ಎಲ್ಲ ಸದಸ್ಯರಿಗೆ ಸಂಬಂಧಿಸಿದಂತೆ ಪ್ರಶ್ನೋತ್ತರ ಇದೆ. ಪ್ರಶ್ನೋತ್ತರಕ್ಕೆ ನೀವು ಅವಕಾಶ ಮಾಡಿಕೊಡಿ. ಸದಸ್ಯರು ಅವರ ಹಕ್ಕೇನಿದೆ ಅದನ್ನು ಚಲಾಯಿಸಿಕೊಳ್ಳಲಿ. ಅನಂತರ ಈ ರೀತಿಯ ಪ್ರತಿಭಟನೆ ಮಾಡುವುದಕ್ಕೆ ನಿಮಗೆ ಅವಕಾಶವಿರುತ್ತದೆ. ಅತ್ಯಂತ ಕಳಕಳಿಯಿಂದ ವಿನಂತಿ ಮಾಡುವುದೇನೆಂದರೆ, ಇಡೀ ರಾಜ್ಯವನ್ನು ಕಾಡುತ್ತಿರುವ ಸಮಸ್ಯೆ ವಿಚಾರದಲ್ಲಿ ನೀವು ಅತ್ಯುಪ್ರವಾಗಿ ಪ್ರತಿಭಟನೆ ಮಾಡಿ ವೆಲ್‌ಗೆ ಬಂದರೆ Question Hour ಅನ್ನು ಕೂಡ ಬದಿಗೊತ್ತಿ ಅದನ್ನು ತೆಗೆದುಕೊಳ್ಳಬೇಕೆಂಬ ಪ್ರಾಮುಖ್ಯವಿರುವ ವಿಷಯ ವಾದರೆ ಜನರೂ ಕೂಡ ನಿಮ್ಮನ್ನು ಮೆಚ್ಚುತ್ತಾರೆ. ನಾವು ಕೂಡ ಅಸಹಾಯಕ ರಾಗುತ್ತೇವೆ. ಇದೆಲ್ಲಾ common, ಯಾರೋ ಏನೋ ಸದನದಲ್ಲಿ ನೋಡಿ ದರೆಂಬ ವಿಚಾರ, ಮೊದಲೊಂದು ಬಾರಿ ರಾಜವರ್ಧನ್ ಎಂಬುವವರು ಒಂದು ಹೆಣ್ಣಿನ ಜೊತೆ ಸಂಪರ್ಕವಿಟ್ಟುಕೊಂಡಿದ್ದಾರೆಂಬ ವಿಚಾರ, ಹೀಗೆ ಈ ಸದನದಲ್ಲಿ ಅನೇಕ ವಿಚಾರಗಳು ಬಂದಿವೆ. ಬಂದಿಲ್ಲವೆಂದಲ್ಲ. ನಾವೇನು particular ಆಗಿ ಒಬ್ಬ ಸದಸ್ಯನ ಶತ್ರುಗಳೂ ಅಲ್ಲ, ಹಿತರಕ್ಷಕರೂ ಅಲ್ಲ. ನಮ್ಮ ಜಾಣತನವೇನೆಂದರೆ ನಾವೆಲ್ಲರೂ ಕೂಡ ಇದನ್ನೆಲ್ಲಾ ಮಾಡುವವರೇ, ಆದರೆ ಸಿಕ್ಕಿಹಾಕಿಕೊಳ್ಳಬಾರದು. ಆದರೆ ಅನು ಅವಿವೇಕಿ ಸಿಕ್ಕಿಹಾಕಿಕೊಂಡಿದ್ದಾನೆ. ಇನ್ನು ಮುಂದೆ ಜಾಣತನದಿಂದ ಇರು ಎಂದು ನಾವು ಆತನಿಗೆ ಸ್ವಲ್ಪ ಬುದ್ದಿ ಹೇಳೋಣ. ತಾವಿದ್ದೀರಿ, ತಮಗೆ ಏನು ವಿಷಯ ಗೊತ್ತಿಲ್ಲ ಹೇಳಿ. ಎಲ್ಲಾದರೂ ಒಂದು ಕಡೆಗೆ ತಮ್ಮ ಹೆಸರು ಬಂತೇ? ನಾನು ಹೇಳುವುದೇನೆಂದರೆ ಆ ರೀತಿಯಾದ ಚಾಣಾಕ್ಷತನ ಎಲ್ಲರಿಗೂ ಇರಬೇಕು. ಸಿ.ಟಿ.ರವಿ ಇದ್ದಾರೆ ಎಂತಹ ಜಾಣನೆಂದರೆ ಎಲ್ಲಾದರೂ ಅವರ

ಹೆಸರು ಬರುತ್ತದೆಯೇ? ದಯಮಾಡಿ ನಾನು ತಮ್ಮಲ್ಲಿ ಕೈಜೋಡಿಸಿ ಕೇಳಿಕೊಳ್ಳುತ್ತೇನೆ. This is definitely an important issue.

ಶ್ರೀ ಸಿ. ಟಿ. ರವಿ : ವಿಧಾನಸೌಧದಲ್ಲಿ ಹೇಗಿರಬೇಕೆಂದು ತಮ್ಮ ಹತ್ತಿರ ನಾನು ಸ್ವಲ್ಪ ತಿಳಿದುಕೊಂಡಿದ್ದೇನೆ. ಹಾಗಾಗಿ ನಾನು ಬಚಾವಾಗಿದ್ದೇನೆ.

ಶ್ರೀ ಕೆ. ಆರ್. ರಮೇಶ್ ಕುಮಾರ್ : Very good. I will further guide you, if need be. ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದು ಮುಖ್ಯವಾದ ವಿಷಯವಲ್ಲವೆಂದು ನಾನು ಹೇಳುವುದಿಲ್ಲ. ಸದನದ ಎಲ್ಲಾ ಪಕ್ಷಗಳ ಸದಸ್ಯರ ಹಿತವಿರುವಂತಹ ಪ್ರಶ್ನೋತ್ತರವನ್ನು ಮೊದಲು ಮುಗಿಸೋಣ. ಅನಂತರ ತಾವೆಲ್ಲಾ ವೆಲ್‌ನಲ್ಲೇ ನಿಂತುಕೊಳ್ಳಿ. You are entitled. ಆಗ justification ಬರುತ್ತದೆ. ವಿಶ್ವೇಶ್ವರ ಹೆಗಡೆ ಕಾಗೇರಿಯವರೆ ಕೇಳಿ, ನೀವು ಬೇರೆ ಯಾವುದಾದರೂ ಇಲಾಖೆಯನ್ನು ನಿರ್ವಹಿಸಿದ್ದ ಮಂತ್ರಿಗಳಾಗಿದ್ದರೆ ನಾನು ಮಾತನಾಡುತ್ತಿರಲಿಲ್ಲ. ನೀವು ಶಿಕ್ಷಣ ಇಲಾಖೆಯ ಮಂತ್ರಿಗಳಾಗಿದ್ದಿರಿ. ಇಲ್ಲಿ one-upmanship ಬೇಡ. ಸಮಯ ಪೋಲು ಮಾಡುವುದು ಬೇಡ. ದಯಮಾಡಿ ಪ್ರಶ್ನೋತ್ತರಕ್ಕೆ ಅವಕಾಶ ಮಾಡಿಕೊಡಿ. ನಂತರ ನೀವು immediate ಆಗಿ ಬಂದು ನಿಲ್ಲಿ.

ಅಧ್ಯಕ್ಷರು: ಒಂದು ನಿಮಿಷ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಅವರು ನನಗೆ request ಮಾಡಿದ್ದಾರೆ. ಆದಕಾರಣ ನಾನು ಕೆಲವು ವಿಚಾರಗಳನ್ನು ಹೇಳಬೇಕಾಗುತ್ತದೆ. ರಮೇಶ್‌ಕುಮಾರ್‌ರವರು ಹಿರಿಯ ಸದಸ್ಯರು, ಅನುಭವಿಗಳಾಗಿದ್ದು, ಕೆಲವು ವಿಚಾರಗಳನ್ನು ಹೇಳಿದ್ದಾರೆ. ನಾನು ಅವರಿಗೆ ಗೌರವ ಕೊಡುತ್ತಿದ್ದೇನೆ. ಆದರೆ ಇವತ್ತು ಇದು ಇಷ್ಟೊಂದು ಮಹತ್ವದ ವಿಚಾರವಾಗಿದ್ದು, ನಿನ್ನೆ ಬೆಳಿಗ್ಗೆ Question Hour ಆದ ನಂತರ raise ಮಾಡಿದಾಗ ಕೂಡ ತಾವು ಆ reply ಮುಗಿಯಲು ಎಂದು ಹೇಳಿದ್ದೀರಿ. Reply ಮುಗಿದ ನಂತರ ಸಂಜೆಯವರೆಗೆ ನಾವು ಸಹಕಾರವನ್ನು ಕೊಟ್ಟಿದ್ದೇವೆ. ಕಳೆದ 23ನೇ ತಾರೀಖಿನಿಂದ ಇಲ್ಲಿಯವರೆಗೆ. . . .

ಅಧ್ಯಕ್ಷರು: ನಾನೊಂದು ವಿಷಯವನ್ನು ಹೇಳುತ್ತೇನೆ. ಮಾನ್ಯ ಸಚಿವರೆ, ಈಗ . . . .

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ರಮೇಶ್ ಕುಮಾರ್‌ರವರು ಮಾತನಾಡಿದ್ದಾರೆ. ನನಗೆ ಎರಡು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಿ. ಅವರು ಹೇಳಿದ ಮೇಲೆ ನಾವು ಹಾಗೆ ಸುಮ್ಮನಿರುವುದಕ್ಕೆ ಸಾಧ್ಯವೇ? ನಾವು ಹೇಳಬೇಕಲ್ಲವೇ? ಮಾಡಬೇಕಲ್ಲವೇ? ಅವರಿಗೆ ಅವಕಾಶ ಕೊಟ್ಟಿದ್ದೀರಿ. ನಾನು ಮಾತನಾಡಬೇಕು. ನಾವು ಈ ಸದನದಲ್ಲಿ ಸಹಕಾರ ಕೊಟ್ಟಿದ್ದೇವೆ. ಕಳೆದ 23ನೇ ತಾರೀಖಿನಿಂದ ಇಲ್ಲಿಯವರೆಗೆ ಒಂದು ದಿನವೂ ಕೂಡ Question Hour ನಿಂತಿಲ್ಲ, ಎಲ್ಲಾ ದಿನ Question Hour ನಡೆದಿದೆ. ಎಲ್ಲಾ ಇಲಾಖೆಗಳ ಚರ್ಚೆಯ ಮೇಲೆ ಎಲ್ಲರೂ participate ಮಾಡಿದ್ದಾರೆ. ಜವಾಬ್ದಾರಿ ವಿರೋಧ ಪಕ್ಷವಾಗಿ ಎಲ್ಲಾ ರೀತಿಯ ಸಹಕಾರ ಕೊಡುವ ಕೆಲಸವನ್ನು ನಮ್ಮ ಕಡೆಯಿಂದ ನಾವು ಮಾಡಿದ್ದೇವೆ. ಎಲ್ಲೂ ಕೂಡ ಒಂದು ಲೋಪವಾಗಿಲ್ಲ. ಆ ರೀತಿ ಸಹಕಾರ ಕೊಟ್ಟಂತಹ ಸಂದರ್ಭದಲ್ಲಿ ಈ ರೀತಿ ಮಹತ್ವದ ವಿಚಾರ ಬಂದಾಗ ಇಡೀ ರಾಜ್ಯ ಇದನ್ನು ಗಮನಿಸುತ್ತಿದೆ. ರಮೇಶ್‌ಕುಮಾರ್‌ರವರು ಜನ ಪ್ರತಿನಿಧಿಗಳು ಯಾವ ರೀತಿ ಇರಬೇಕೆಂದು ಹೇಳಿದರು. ನಾವೆಲ್ಲರೂ ತಲೆತಗ್ಗಿಸುವಂತಹ ವಿಚಾರವಾಗಿದೆಯೆಂದು ನಿನ್ನೆ ಒಂದೇ ಮಾತಿನಲ್ಲಿ ಹೇಳಿದ್ದೇನೆ. ಇದು ಕೇವಲ ಒಬ್ಬ ಕಾಶಪ್ಪನವರ್‌ರವರ ಪ್ರಶ್ನೆ ಅಲ್ಲ. ಇನ್ನೊಬ್ಬ ಶಾಸಕರ ಪ್ರಶ್ನೆ ಅಲ್ಲ. ಇವತ್ತು ಜನಪ್ರತಿನಿಧಿಗಳು ಯಾವ ರೀತಿ ನಡೆದುಕೊಳ್ಳಬೇಕು, ಯಾವ ರೀತಿ ಇರಬೇಕೆಂಬುದನ್ನು ಇದರ ಮೇಲೆ ನಾವು ಕಲಿತುಕೊಳ್ಳಬೇಕಾಗುತ್ತದೆ. ಎಲ್ಲರೂ ಒಂದಲ್ಲ ಒಂದು ರೀತಿಯಲ್ಲಿ involve ಆಗಿರುತ್ತೇವೆಂದು ರಮೇಶ್ ಕುಮಾರ್‌ರವರು ಹೇಳಿದರು. ಎಲ್ಲರೂ ಆಗಿರುವುದಿಲ್ಲ, ಕೆಲವು ಶಾಸಕರು ಮಾಡುವ ತಪ್ಪಿನಿಂದ ಇಡೀ ಒಂದು ಶಾಸಕ ಸಮುದಾಯಕ್ಕೆ ಕೆಟ್ಟ ಹೆಸರು ಬರುತ್ತದೆ. ನಾವೆಲ್ಲಾ ತಲೆತಗ್ಗಿಸುವಂತಹ ಮತ್ತು ನಾಚಿಕೆಪಡುವಂತಹ ವಿಚಾರವಾಗಿದ್ದು, ಜನರಿಗೆ ನಮ್ಮ ಬಗ್ಗೆ ಅಸಡ್ಡೆಯಿರುವ ಸಂದರ್ಭದಲ್ಲಿ ಇಂತಹ ಘಟನೆಗಳಿಂದ ನಮ್ಮ ಬಗ್ಗೆ ಇನ್ನೂ ಹೆಚ್ಚು ಕೆಟ್ಟ ಹೆಸರು ಬರುವುದಕ್ಕೆ

ಸಾಧ್ಯವಾಗುತ್ತದೆ. ಪೊಲೀಸ್ ವ್ಯವಸ್ಥೆ ಬಗ್ಗೆ ಹೇಳಬೇ ಕೆಂದರೆ, ನಮ್ಮನ್ನೆಲ್ಲಾ ರಕ್ಷಣೆ ಮಾಡುವವರು ಪೊಲೀಸ್‌ನವರು. ಜನಪ್ರತಿ ನಿಧಿಗಳು ಅವರ ಮೇಲೆ ಹಲ್ಲೆ ಮಾಡಿದರೆ ಮುಂದೆ ಅವರು ಹೇಗೆ ಕೆಲಸ ಮಾಡಬೇಕು? ಹಾಗಾದರೆ ಪೊಲೀಸ್ ಇಲಾಖೆಯನ್ನೇ ಮುಚ್ಚಿಬಿಡಿ. ಅದು ಬೇಕಾಗಿಲ್ಲ. ಪೊಲೀಸ್ ಇಲಾಖೆಯ ಪೊಲೀಸ್ ಸಿಬ್ಬಂದಿಗಳನ್ನು, ಪೊಲೀಸ್ ಪೇದೆಗಳನ್ನು ರಕ್ಷಣೆ ಮಾಡುವಂತಹ ಜವಾಬ್ದಾರಿ ಎಲ್ಲರಿಗೂ ಬಂದಿದೆ. ಇವತ್ತು ಜನಸಾಮಾನ್ಯರು ರಕ್ಷಣೆ ಮಾಡುವಂತಹ ಪರಿಸ್ಥಿತಿ ಬಂದಿದೆ. ಅದಕ್ಕಾಗಿ ಇದೊಂದು ಮಹತ್ವದ ವಿಚಾರವೆಂದು ನಾನು ಹೇಳುತ್ತಿದ್ದೇನೆ. ಪ್ರಶ್ನೋತ್ತರ, ಮತ್ತೊಂದು. . . . .

ಶ್ರೀ ಕೃಷ್ಣ ಭೈರೇಗೌಡ (ಕೃಷಿ ರಾಜ್ಯ ಸಚಿವರು) : ಪ್ರಶ್ನೋತ್ತರ ಅವಧಿ ಮುಗಿದ ನಂತರ ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಾರೆಂದು ಹೇಳಿದ್ದಾರೆ. ದಯವಿಟ್ಟು ಸದನ ನಡೆಯುವುದಕ್ಕೆ ಅವಕಾಶ ಮಾಡಿಕೊಡಿ. ಇದನ್ನು ಪ್ರತಿಷ್ಠೆ ಮಾಡಿಕೊಂಡು ನಿಮ್ಮ ಪ್ರತಿಷ್ಠೆಗೆ ಸದನವನ್ನು ಬಲಿಕೊಡಬೇಡಿ. ಒಣ ಪ್ರತಿಷ್ಠೆಗೆ ಈ ಸದನದ ಕಲಾಪವನ್ನು ಬಲಿಕೊಡಬೇಡಿಯೆಂದು ತಮ್ಮ ಮೂಲಕ ನಾನು ವಿರೋಧ ಪಕ್ಷದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇದರ ಬಗ್ಗೆ ಚರ್ಚೆ ಆಗಲಿ, ಸಚಿವರು ಉತ್ತರ ಕೊಡುತ್ತಾರೆ. ಉತ್ತರ ಕೊಡುವುದಕ್ಕೆ ಸರ್ಕಾರ ತಯಾರಿದೆ. ಉತ್ತರ ಕೊಡುವುದಕ್ಕೆ ಸರ್ಕಾರ ತಯಾರಿದ್ದರೂ ಇವರಿಗೆ ಉತ್ತರ ಬೇಕಿಲ್ಲ. ಇವರಿಗೆ ಕೇವಲ ಗದ್ದಲ ಮಾಡುವುದು ಬೇಕಾಗಿದೆ. ಉತ್ತರ ಕೊಡುವುದಕ್ಕೆ ನಾವು ತಯಾರಿದ್ದೇವೆ. ಪ್ರಶ್ನೋತ್ತರ ಅವಧಿ ನಂತರ ಉತ್ತರ ಕೊಡುತ್ತೇವೆ. ದಯವಿಟ್ಟು ಸದನ ನಡೆಯುವುದಕ್ಕೆ ಅವಕಾಶ ಕೊಡಿ. ಒಣಪ್ರತಿಷ್ಠೆ ಇಟ್ಟುಕೊಂಡು ಸದನದ ಕಲಾಪವನ್ನು ನಿಮ್ಮ ಒಣಪ್ರತಿಷ್ಠೆಗೆ ಬಲಿಕೊಡುತ್ತಿದ್ದೀರಿ. ನಮ್ಮಿಂದ ಜನ ಬಹಳ ನಿರೀಕ್ಷೆ ಇಟ್ಟುಕೊಂಡಿದ್ದಾರೆ. ರಾಜ್ಯದ ಜನ ನಮ್ಮನ್ನು ನೋಡುತ್ತಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಇನ್ನೊಬ್ಬ ಶಾಸಕರಾದ ಬಿ. ಎ. ಬಸವರಾಜ ಟ್ರಾಫಿಕ್ ಪೊಲೀಸ್‌ನವರಿಗೆ ಕಪಾಳ ಮೋಕ್ಷ ಮಾಡುತ್ತಾರೆ. ಅಂದರೆ ಶಾಸಕರು ಕಾನೂನನ್ನು ಕೈಗೆತ್ತಿಕೊಂಡರೆ, ಹೆದರಿಕೆ ಇಲ್ಲದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ನಾವು ಇಲ್ಲಿಯವರೆಗೆ ಸಹಕಾರ ಕೊಡುತ್ತಾ ಬಂದಿದ್ದೇವೆ. ಇದೊಂದು issue

ಮುಗಿಯಲಿ ಇದಕ್ಕೆ ತಮ್ಮ stand ಏನೆಂದು ಸರ್ಕಾರ ಉತ್ತರ ಕೊಡಲಿ. ಇವತ್ತು ಕಾಶಪ್ಪನವರ್ ಅಲ್ಲದೆ ಬೇರೆ ಜನಸಾಮಾನ್ಯರು ಈ ರೀತಿ ತಪ್ಪು ಮಾಡಿದ್ದರೆ FIR file ಮಾಡಿ ಅವನನ್ನು arrest ಮಾಡುತ್ತಿದ್ದರು. ಆದರೆ ಕಾಶಪ್ಪನವರ್‌ರವರು ಇವತ್ತಿನವರೆಗೆ arrest ಆಗಿಲ್ಲ. ಜನಪ್ರತಿನಿಧಿಗಳು ಎಂದು arrest ಮಾಡಿಲ್ಲವೋ ಹೇಗೆ? ಅವರ ರಕ್ಷಣೆ ಮಾಡುವಂತಹ ಕೆಲಸವನ್ನು ತಾವು ಮಾಡುತ್ತಿದ್ದೀರೋ ಹೇಗೆ? ಅದಕ್ಕಾಗಿ ಈ ಬಗ್ಗೆ ಸರ್ಕಾರ stand ಹೇಳಬೇಕು. ನಂತರ ಪ್ರಶ್ನೋತ್ತರ ನಡೆಯಲಿ, ಇಲಾಖೆ ಚರ್ಚೆ ನಡೆಯಲಿ ಎಲ್ಲದಕ್ಕೂ ಸಹಕಾರ ಕೊಡುವುದಕ್ಕೆ ನಾವು ತಯಾರಿದ್ದೇವೆ. ನಾವೇನು ಪ್ರಶ್ನೋತ್ತರಕ್ಕೆ ಅಡಚಣೆ ಮಾಡುವುದಿಲ್ಲ. ಇದು ಮಹತ್ವವಾದ ವಿಚಾರವಾಗಿದೆ. ಸರ್ಕಾರ ಈ ಬಗ್ಗೆ ತಕ್ಷಣ ಒಂದು ಉತ್ತರವನ್ನು ಕೊಡಲಿ.

(ಗೊಂದಲ)

ಶ್ರೀ ಡಿ. ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ಸದನ ಸಂಪ್ರದಾಯ ಬದ್ಧವಾಗಿ ನಡೆಯಬೇಕಾಗುತ್ತದೆ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ : ಬಿ.ಜೆ.ಪಿ. ಸರ್ಕಾರವಿದ್ದಾಗ ಈ ಸದನದಲ್ಲಿ ಏನು ನಡೆಯಿತೆಂದು ಬಿ.ಜೆ.ಪಿ.ಯವರು ಮೊದಲು ತಿಳಿದುಕೊಳ್ಳಲಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಗೃಹ ಮಂತ್ರಿಗಳಿಗೆ ಉತ್ತರ ಕೊಡುವುದಕ್ಕೆ ಹೇಳಿ. ಅವರು ನಿನ್ನೆಯೇ ಉತ್ತರ ಕೊಡುತ್ತೇವೆಂದು ಹೇಳಿದ್ದರು. ಅವರು ಉತ್ತರ ಕೊಡುವುದಕ್ಕೆ ತಯಾರಿದ್ದಾರೆ ಆದರೆ ನಿಮಗೆ ಮನಸ್ಸಿಲ್ಲ.

(ಗೊಂದಲ)

ಶ್ರೀ ಡಿ. ಕೆ. ಶಿವಕುಮಾರ್ : ದಯವಿಟ್ಟು ಪ್ರಶ್ನೋತ್ತರವನ್ನು ತೆಗೆದು ಕೊಳ್ಳಲಿ, Reply ಕೊಡುತ್ತಾರೆ. It will set a very bad precedent. ಇದನ್ನು

ಇವತ್ತು allow ಮಾಡಿದರೆ ಈ ಮನೆಯ ಸಂಪ್ರದಾಯವನ್ನು ಹಾಳು ಮಾಡಿದಂತಾಗುತ್ತದೆ. ಅದಕ್ಕೆ ದಯವಿಟ್ಟು ಅವಕಾಶ ಕೊಡಬೇಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಕಾಶಪ್ಪನವರ್ ಅವರು ಶಿವಕುಮಾರ್‌ರವರ ಶಿಷ್ಯರೆಂದು ಕಾಣುತ್ತದೆ. ಅದಕ್ಕೆ ಅವರ ರಕ್ಷಣೆ ಮಾಡುವುದಕ್ಕೆ ಹೊರಟಿದ್ದೀರಿ. ನಮಗೇನು ಇಲ್ಲಿ ಬುದ್ದಿ ಹೇಳಬೇಕಾಗಿಲ್ಲ.

(ಗೊಂದಲ)

ಶ್ರೀ ಡಿ. ಕೆ. ಶಿವಕುಮಾರ್ : ಗೃಹ ಸಚಿವರು reply ಕೊಡುವುದಕ್ಕೆ ತಯಾರಿದ್ದಾರೆ. ಆದರೆ ಎಲ್ಲಾ ಸದಸ್ಯರಿದ್ದಾರೆ. ಮೊದಲು Question Hour ಮುಗಿಸಲಿ. ಇದಾದ ನಂತರ ಡಿಬೇಟ್ ಮಾಡಲಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : Questino Hour ಅನ್ನು ನಂತರ ಕೂಡ ನಡೆಸಬಹುದು. ಮೊದಲು ಇದಕ್ಕೆ ಉತ್ತರ ಕೊಡಲಿ. ನಿನ್ನೆಯೂ delay ಮಾಡಿದರೂ ಇವತ್ತು delay ಮಾಡಿದರೆ ಹೇಗೆ?

(ಗೊಂದಲ)

ಶ್ರೀ ಡಿ. ಕೆ. ಶಿವಕುಮಾರ್ : ಈಗಲೇ ಉತ್ತರ ಕೊಡಬೇಕೆಂದೇನೂ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಮೊದಲು ಉತ್ತರ ಕೊಡಿ. ನಿಮ್ಮಿಂದ ನಾವು ಬುದ್ದಿ ಕಲಿಯಬೇಕಾಗಿಲ್ಲ.

(ಗೊಂದಲ)

ಅಧ್ಯಕ್ಷರು : ನಿನ್ನೆ ಪ್ರಶ್ನೆ ಎತ್ತಿದಾಗ ನಂತರ ಉತ್ತರ ಕೊಡುತ್ತಾರೆಂಬ ಮಾತನ್ನು ಹೇಳಿದರು. ಪ್ರಶ್ನೋತ್ತರ ಆಯಿತು, ಎಲ್ಲವೂ ಆಯಿತು. ಕಡೆಗೆ ವಿಧಾನ ಪರಿಷತ್ ಮತ್ತು ವಿಧಾನ ಸಭೆ ಎರಡರಲ್ಲೂ ನಾಳೆ ಉತ್ತರ

ಕೊಡುತ್ತೇವೆಂದು ಆದ ನಂತರ ಆಗಬಹುದೆಂದು ಮುಂದೆ ಹಾಕಿಕೊಂಡೆವು. ಆ ಕಾರಣಕ್ಕಾಗಿಯೇ ಪ್ರಶ್ನೋತ್ತರಕ್ಕಿಂತ ಮೊದಲೇ ಇದನ್ನು ತೆಗೆದುಕೊಳ್ಳಬೇಕಾಯಿತು. ನಿನ್ನೆಯೇ ಆಗಬೇಕಾಗಿತ್ತು ಆದರೆ late ಆದ ಕಾರಣ ಈ ವಿಷಯದ ಬಗ್ಗೆ ಚರ್ಚೆಗೆ ಅವಕಾಶ ಕೊಡುವ ಸನ್ನಿವೇಶ ಬಂತು.

(ಗೊಂದಲ)

ಶ್ರೀ ಡಿ. ಕೆ. ಶಿವಕುಮಾರ್ : ನಾವು ಉತ್ತರ ಕೊಡುವುದಿಲ್ಲವೆಂದು ಹೇಳುತ್ತಿಲ್ಲ. ಒಂದು ಗಂಟೆಯಲ್ಲಿ Question Hour ಮುಗಿಯುತ್ತದೆ.

(ಗೊಂದಲ)

ಶ್ರೀ ಡಿ. ಕೆ. ಶಿವಕುಮಾರ್ : ಒಂದು ನಿಮಿಷ ಇರಿ. ನಾವು ಕೂಡ ಅಪೀಲು ಮಾಡುವುದಕ್ಕೆ. . . . .

(ಗೊಂದಲ)

ಅಧ್ಯಕ್ಷರು : ಆಯಿತು, ಬಿಡಿ. ಯಾಕೆ ಈ ರೀತಿ ಮಾಡುತ್ತೀರಿ? ಇದೇನು ಚರ್ಚೆಯೇ?

ಶ್ರೀ ಡಿ. ಕೆ. ಶಿವಕುಮಾರ್ : ಮನೆಯ ಸಂಪ್ರದಾಯವನ್ನು ಮುರಿಯುವುದು ಬೇಡವೆಂದು ತಮ್ಮಲ್ಲಿ ಸರ್ಕಾರದ ಪರವಾಗಿ ಮನವಿ ಮಾಡಿಕೊಳ್ಳುತ್ತೇವೆ.

ಅಧ್ಯಕ್ಷರು : ಇದರಲ್ಲೇ ಸಮಯವನ್ನು ವ್ಯರ್ಥ ಮಾಡುವುದು ಬೇಡ.

ಶ್ರೀ ಡಿ. ಕೆ. ಶಿವಕುಮಾರ್ : Nothing will fall in one hour. But, we should not spoil the right of the Members.

ಅಧ್ಯಕ್ಷರು : prestige ಬೇಡ ಸಮಯ ವ್ಯರ್ಥ ಮಾಡುವುದು ಬೇಡ. ಒಂದು ಹೇಳಿಕೆಯಿದ್ದರೆ ಕೊಟ್ಟುಬಿಡಿ. ಶುರು ಮಾಡೋಣ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ : ಹೇಳಿಕೆಯನ್ನು ಕೊಡುವುದಕ್ಕೆ ಅಭ್ಯಂತರವಿಲ್ಲ.

(ಗೊಂದಲ)

ಅಧ್ಯಕ್ಷರು : ಹೇಳಿಕೆ ಕೊಡುವುದಕ್ಕೆ ನಿಮಗೇನಾದರೂ ತೊಂದರೆ ಇದೆಯೇ?

ಶ್ರೀ ಕೆ. ಜೆ. ಜಾರ್ಜ್ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ಆದರೆ ಇದೊಂದು ತಪ್ಪು ಪದ್ಧತಿಯಾಗುತ್ತದೆ. ರಾಜ್ಯದ ವಿಚಾರದಲ್ಲಿ ಅಷ್ಟು ದೊಡ್ಡ ಗಮನಯುಕ್ತ ವಿಚಾರವಾಗಿದ್ದರೆ Adjournment Motion ತೆಗೆದುಕೊಂಡು ಬರಬೇಕಾಗಿತ್ತು. ಅಥವಾ ನಿಯಮ 69 ರಲ್ಲಿ ಚರ್ಚೆ ಮಾಡಬಹುದಿತ್ತು. ಅವರು ಈ ವಿಷಯವನ್ನು ತಂದಿರುವುದು Zero Hour ನಲ್ಲಿ, Zero Hour ನಲ್ಲಿ ಉತ್ತರ ಕೊಡುವುದಕ್ಕೆ ನನಗೆ ಮೂರು ದಿವಸಗಳ time ಇದೆ. ಸಚಿವರು ಇದೇ ರೀತಿಯಲ್ಲಿ, ಹೀಗೇ ಉತ್ತರ ಕೊಡಬೇಕೆಂದರೆ ಕೊಡುವುದಕ್ಕಾಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ನಾವೆಲ್ಲಿ ಇದೇ ರೀತಿ ಉತ್ತರ ಕೊಡಿಯೆಂದು ಹೇಳಿದ್ದೇವೆ? ಮಾನ್ಯ ಅಧ್ಯಕ್ಷರೆ, ನಾವು ಉತ್ತರ ಕೊಡಿಯೆಂದು ಕೇಳಿದ್ದೇವೆ ಅಷ್ಟೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಅವರೇ Suo-motu ಒಂದು statement ಅನ್ನು ನಿನ್ನೆ ಮಾಡಬೇಕಾಗಿತ್ತು. on his own ಮಾಡಬೇಕಾಗಿತ್ತು. 24 ಗಂಟೆಯಲ್ಲ, 3 ದಿವಸ ಅಲ್ಲ. ಇದು ಮೊನ್ನೆ ರಾತ್ರಿಯಾಗಿರುವಂತಹ ಘಟನೆ. ನೀವು as a Home Minister you should have made a suo-motu statement.

ಶ್ರೀ ಕೆ. ಜೆ. ಜಾರ್ಜ್ (ಗೃಹ ಮಂತ್ರಿ): ಮಾನ್ಯ ಅಧ್ಯಕ್ಷರೆ, ನನ್ನ ಹತ್ತಿರ statement ready ಇದೆ.

ಶ್ರೀ ಎಸ್. ಸುರೇಶ್ ಕುಮಾರ್ : ಹಾಗಾದರೆ ಓದಿ.

ಶ್ರೀ ಕೆ. ಜೆ. ಜಾರ್ಜ್ : ನೀವು ಹೇಳಿದ ಹಾಗೆ ಓದುವುದಕ್ಕೆ ಆಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಜಾರ್ಜ್‌ರವರೆ, ನಾವು ಹೇಳಿದ ಹಾಗೆ ಬೇಡ. ನಿಮಗೆ ಏನು ತಿಳಿದಿದೆ ಅದನ್ನು ಮಾಡಿ.

(ಗೊಂದಲ)

ಶ್ರೀ ಅಪ್ಪಚ್ಚು ರಂಜನ್ : Speaker ರವರು ಹೇಳಿದ ಹಾಗೆ ಕೊಟ್ಟುಬಿಡಿ. Speaker ರವರು ಆದೇಶ ಮಾಡಿದ್ದಾರೆ. ದಯವಿಟ್ಟು ಕೊಟ್ಟುಬಿಡಿ.

ಶ್ರೀ ಕೆ. ಜೆ. ಜಾರ್ಜ್ : ಮಾನ್ಯ ಸಭಾಧ್ಯಕ್ಷರು ಆದೇಶವನ್ನು ಕೊಟ್ಟಿದ್ದಾರೆ. ನಾನು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಸದನದಲ್ಲಿ ಮೊದಲು ಪ್ರಶ್ನೋತ್ತರ ಆಗಲಿ. ಪ್ರಶ್ನೋತ್ತರವನ್ನು ಬಿಟ್ಟು ಈಗ ಉತ್ತರವನ್ನು ಕೊಟ್ಟರೆ ಅದು ಸದನಕ್ಕೆ ತಪ್ಪು ಸಂಪ್ರದಾಯವಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಈ ಸಂಪ್ರದಾಯವನ್ನೆಲ್ಲ ಬಿಟ್ಟುಬಿಡಿ. ಹಿಂದಿನ ದಾಖಲೆಗಳನ್ನು ತೆಗೆದುಬಿಡಿ. ಶೂನ್ಯವೇಳೆ, ತುರ್ತುಪರಿಸ್ಥಿತಿ ಬಂದಾಗ ಲೆಲ್ಲಾ ಎತ್ತಿದ್ದೇವೆ. ಸನ್ಮಾನ್ಯ ಅಧ್ಯಕ್ಷರೇ, ಸರ್ಕಾರ ಅವರನ್ನು ರಕ್ಷಣೆ ಮಾಡುವುದಕ್ಕೆ ಹೊರಟಿದೆ. ಉತ್ತರ ಕೊಡುವುದಕ್ಕೆ ಅವರಿಗೆ ಧೈರ್ಯವಿಲ್ಲ. ಆ ಕಾಶೆಪ್ಪನವರ್ ಅವರನ್ನು ರಕ್ಷಣೆ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ : ಸನ್ಮಾನ್ಯ ಅಧ್ಯಕ್ಷರೇ, ಹಿಂದಿನ ಐದು ವರ್ಷ ಅವರು ಏನು ಸಂಪ್ರದಾಯವನ್ನು ಉಳಿಸಿದ್ದಾರೆ ಕೇಳಿ?

(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರು ಸದನದ ಬಾವಿಯೊಳಗೆ ಬಂದರು)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ನೀವು ಹೇಳಿದ ಮಾತನ್ನು ಅವರು ಕೇಳುವುದಿಲ್ಲವೆಂದರೆ ಇದು ಯಾವ ನಿಯಮ?

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ನಮ್ಮ ಸರ್ಕಾರವಿದ್ದ ಸಂದರ್ಭದಲ್ಲಿ ಅವರು ಏನು ಸಂಪ್ರದಾಯ ಹಾಕಿದ್ದಾರೆಂದು ಕಡತ ತೆಗೆದು ನೋಡಲಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅವರಿಗೆ ಉತ್ತರ ಕೊಡುವುದಕ್ಕೆ ಧೈರ್ಯವಿಲ್ಲ. ಮಾನ್ಯ ಅಧ್ಯಕ್ಷರೆ, ಸರ್ಕಾರ ತಮ್ಮ ಸೂಚನೆಯನ್ನು ಧಿಕ್ಕರಿಸುತ್ತಿದೆ. ತಾವು ನಿರ್ಣಯ ತೆಗೆದುಕೊಳ್ಳಬೇಕು. ನಿಮ್ಮ ನಿರ್ಣಯವನ್ನು ಧಿಕ್ಕರಿಸುತ್ತಿದ್ದಾರೆ. ವಿರೋಧಿಸುತ್ತಿದ್ದಾರೆ.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ : ಮಾನ್ಯ ಅಧ್ಯಕ್ಷರೆ, ಹಾಗಾದರೆ, ಶಾಸಕರಿಗೆ ಬೇಲ್ ಸಿಗುವವರಿಗೆ ಇವರು ಉತ್ತರ ಕೊಡುವುದಿಲ್ಲವೇ?

(ಗೊಂದಲ)

ಅಧ್ಯಕ್ಷರು : ದಯಮಾಡಿ, ಪ್ರಶ್ನೋತ್ತರ ನಡೆಸುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ತಾವೇ ನಾಳೆ ಉತ್ತರವನ್ನು ಕೊಡಿಸುತ್ತೇವೆಂದು ಹೇಳಿದ್ದೀರಿ. ತಾವು ಸರ್ಕಾರದ ಒತ್ತಡದಲ್ಲಿದ್ದೀರಿ ಎಂದು ಕಾಣಿಸುತ್ತದೆ.

ಶ್ರೀ ಅಭಯ್ ಚಂದ್ರ ಜೈನ್ : ಬಿಜೆಪಿಯವರು 5 ವರ್ಷಗಳಲ್ಲಿ ಕೇವಲ 165 ದಿವಸ ಸದನವನ್ನು ನಡೆಸಿದ್ದಾರೆ. ನಮ್ಮ ಸರ್ಕಾರ ಒಂದು ವರ್ಷದಲ್ಲೇ 100 ದಿವಸ ಸದನವನ್ನು ನಡೆಸಿದ್ದೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಅವರಿಗೆ ಉತ್ತರ ಕೊಡಿಯೆಂದು ತಾವೇ ಮೊದಲು ಹೇಳಿದ್ದೀರಿ. ಅವರು ಉತ್ತರ ಕೊಡುವುದಕ್ಕೆ ಹಿಂದೆ ಮುಂದೆ ಮಾಡಿದರು.

ಅಧ್ಯಕ್ಷರು : ನಾನು ಯಾರನ್ನೂ ಒತ್ತಾಯ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅಧ್ಯಕ್ಷರೆ, ತಾವು ಆ ಸ್ಥಾನದಿಂದ ಒತ್ತಾಯ ಮಾಡಬೇಕು.

ಅಧ್ಯಕ್ಷರು : ಅವರಿಗೆ ಉತ್ತರ ಕೊಡಿಯೆಂದು ಹೇಳಿದ್ದೇನೆ. ಅದಕ್ಕೆ ಅವರು ಆಮೇಲೆ ಉತ್ತರವನ್ನು ಕೊಡುತ್ತೇವೆಂದು ಹೇಳಿದ್ದಾರೆ. ದಯವಿಟ್ಟು, ನಿಮ್ಮಲ್ಲಿ ಅಪೀಲ್ ಮಾಡಿಕೊಳ್ಳುತ್ತೇನೆ. ಪ್ರಶ್ನೋತ್ತರವಾದ ಮೇಲೆ ಉತ್ತರ ಕೊಡುವುದಕ್ಕೆ ಅವಕಾಶ ಮಾಡಿಕೊಡಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೇ, ತಮ್ಮ ಸೂಚನೆಯನ್ನು ಧಿಕ್ಕರಿಸುವುದಕ್ಕೆ ಸರ್ಕಾರಕ್ಕೆ ಅವಕಾಶವಿಲ್ಲ. ಅಧಿಕಾರವಿಲ್ಲ.

(ಗೊಂದಲ)

ಶ್ರೀ ಕೃಷ್ಣ ಭೈರೇಗೌಡ : ಇವರಿಗೆ ಸದನವನ್ನು ನಡೆಸಲು ಇಚ್ಛೆ ಇಲ್ಲ ಅಧ್ಯಕ್ಷರೇ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಇದು ಬಹಳ ಗಂಭೀರವಾದಂತಹ ವಿಚಾರ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಇವರು ಅಪರಾಧಿಗಳನ್ನು ರಕ್ಷಣೆ ಮಾಡುವುದಕ್ಕೆ ಹೊರಟಿದ್ದಾರೆ.

(ಗೊಂದಲ)

ಶ್ರೀ ಕೃಷ್ಣ ಭೈರೇಗೌಡ : ರಾಜ್ಯದಲ್ಲಿ ಅನೇಕ ಸಮಸ್ಯೆಗಳಿವೆ, ಆ ಸಮಸ್ಯೆಗಳನ್ನು ಚರ್ಚೆ ಮಾಡುವುದನ್ನು ಬಿಟ್ಟು ಈ ತರಹ ಸದನದ ಸಮಯವನ್ನು

ಹಾಳು ಮಾಡುತ್ತಿದ್ದಾರೆ. ಒಣ ಪ್ರತಿಷ್ಠೆ ಇವರದು. ಅವರಿಗೆ ಸದನದ ಸಮಯವನ್ನು ಹಾಳು ಮಾಡಬೇಡಿ ಎಂದು ಹೇಳಿ, ಅಧ್ಯಕ್ಷರೇ, ಸುಮ್ಮನೇ ಯಾವುದೋ ಪ್ರಕರಣವನ್ನು ತೆಗೆದುಕೊಂಡು ಸಮಯವನ್ನು ಹಾಳು ಮಾಡುತ್ತಿದ್ದಾರೆ. ಇದನ್ನು ಪ್ರತಿಷ್ಠೆಯನ್ನಾಗಿ ಮಾಡಿಕೊಂಡು ಸದನವನ್ನು ಬಲಿ ಕೊಡುತ್ತಿದ್ದಾರೆ ಅಧ್ಯಕ್ಷರೇ, ನಾವು ಚರ್ಚೆಗೆ ತಯಾರಿದ್ದೇವೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, statement ready ಇದೆ ಎಂದು ಹೇಳುತ್ತಾರೆ. Avoid ಮಾಡುತ್ತಿದ್ದಾರೆ. Arrest ಮಾಡುವ ಬಗ್ಗೆ ಹೇಳಬೇಕಾಗುತ್ತದೆ. ಇವರು ಸ್ಪಷ್ಟವಾದ ಉತ್ತರವನ್ನು ಕೊಡಬೇಕಾಗುತ್ತದೆ. ಪೊಲೀಸರ ರಕ್ಷಣೆ ಮಾಡುವುದಕ್ಕೆ ಆಗುತ್ತಿಲ್ಲ. ಅವರಿಗೆ ನೈತಿಕ ಹಕ್ಕಿಲ್ಲ. ಪೊಲೀಸ್ ಇಲಾಖೆಯಲ್ಲಿ ಪೊಲೀಸರ ಮೇಲೆ ಹಲ್ಲೆಯಾಗಿದೆ. ಆದರೂ ಗೃಹಮಂತ್ರಿ ಸುಮ್ಮನೆ ಕುಳಿತಿದ್ದಾರೆ. ಗೃಹ ಮಂತ್ರಿಯವರೆ, ಇದು ನಿಮ್ಮ ಇಲಾಖೆ ಯಾಗಿದೆ. ಗೃಹ ಮಂತ್ರಿ ನೀವು ರಾಜೀನಾಮೆ ಕೊಟ್ಟು ಹೋಗಬೇಕು. ಗೃಹ ಮಂತ್ರಿ ಏಕೆ ಇರಬೇಕು? ಪೊಲೀಸರ ಮೇಲೆ ಹಲ್ಲೆಯಾಗಿದೆ. ಒಬ್ಬ ಶಾಸಕರು ಟ್ರಾಫಿಕ್ ಪೊಲೀಸರ ಮೇಲೆ ಹಲ್ಲೆ ಮಾಡುತ್ತಾರೆ. ಒಬ್ಬ ಶಾಸಕರು ಪೊಲೀಸರನ್ನು ಓಡಿಸಿಕೊಂಡು ಹೋಗಿ ಹೊಡೆಯುತ್ತಾರೆ. ನಿಮ್ಮ ಪೊಲೀಸರಿಗೆ ರಕ್ಷಣೆಯಿಲ್ಲ. ನೀವು ಗೃಹಮಂತ್ರಿ ನಿಮಗೂ ರಕ್ಷಣೆಯಿಲ್ಲ. ನಾಳೆ ನಿಮ್ಮ ಮೇಲೂ ಕೇಸ್ ಹಾಕುತ್ತಾರೆ. ಆ ಪರಿಸ್ಥಿತಿ ಬರುತ್ತದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಪೊಲೀಸರ ಮೇಲೆ ಹಲ್ಲೆಯಾದರೂ ಅವರನ್ನು ರಕ್ಷಣೆ ಮಾಡುವುದಕ್ಕೆ ಸಾಧ್ಯವಿಲ್ಲದಂತಹ ಗೃಹ ಮಂತ್ರಿ. ನಿಜವಾಗಿಯೂ ಅವರು ರಾಜೀನಾಮೆ ಕೊಡಬೇಕಾಗುತ್ತದೆ. ಪೊಲೀಸರಿಗೆ ಸಾರ್ವಜನಿಕರು ರಕ್ಷಣೆ ಕೊಡುವ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. ಗೃಹ ಮಂತ್ರಿಯಾಗಿ ನೀವು complete failure ಆಗಿದ್ದೀರಿ. ನೀವು ಅವರ ಮೇಲೆ

action ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ಪೊಲೀಸರು ಎಲ್ಲಿಗೆ ಹೋಗಬೇಕು? ಪೊಲೀಸರ ಮೇಲೆ ಹಲ್ಲೆಯಾಗುತ್ತಿದೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಸದನವನ್ನು ಮುಂದೂಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಉತ್ತರ ಕೊಡುವುದಕ್ಕೆ ಧೈರ್ಯವಿಲ್ಲವೆಂದರೆ ಅಸಹಾಯಕರಾಗಿದ್ದೀರಿ ನೀವು. ಅಧ್ಯಕ್ಷರು ನಿಮಗೆ ಉತ್ತರ ಕೊಡಿ ಎಂದು ruling ಕೊಟ್ಟ ಮೇಲೂ ನಿಮಗೆ ಉತ್ತರ ಕೊಡುವುದಕ್ಕೆ ಧೈರ್ಯವಿಲ್ಲ. ಅಂದಮೇಲೆ ಇದು ಮುಚ್ಚಿಹಾಕುವಂಥ ಪ್ರಯತ್ನವಾಗಿದೆ. ಕೋರ್ಟ್‌ಗೆ anticipatory bail ಗೆ ಹಾಕಿದ್ದಾರೆ. ಆ anticipatory bail ಸಿಗುವವರೆಗೆ ತಾವು ಉತ್ತರ ಕೊಡುವುದಿಲ್ಲವೆಂದು ನನಗೆ ಗೊತ್ತಿದೆ. ಗೃಹ ಇಲಾಖೆಗೆ guts ಇದ್ದರೆ ಅವರನ್ನು arrest ಮಾಡಿಸಿ.

ಶ್ರೀ ಕೆ. ಜೆ. ಜಾರ್ಜ್ : ಇಲ್ಲೇ ಕುಳಿತು decide ಮಾಡಬಹುದಾ? Investigation ಮಾಡುವುದಕ್ಕೆ ಇದೇನು ಕೋರ್ಟಾ, ಪೊಲೀಸ್ ಸ್ಟೇಷನಾ?

ಶ್ರೀ ಜಗದೀಶ್ ಶೆಟ್ಟರ್ : ನಿಮಗೆ ಆ guts ಇದ್ದರೆ, ಆ ಛಾತಿ ಇದ್ದರೆ ಅವರನ್ನು arrest ಮಾಡಿ. ಇನ್ನೊಬ್ಬ ಸೋಮಶೇಖರ್ ಗೌಡ ಎನ್ನುವ ವ್ಯಕ್ತಿ ಗೂಂಡಾ ಆಕ್ಟ್‌ನಲ್ಲಿದಂಥ ವ್ಯಕ್ತಿ ಅವನು ಪೊಲೀಸರ ಮೇಲೆ ಹಲ್ಲೆ ಮಾಡುತ್ತಾನೆ. ಆತನು ಕಾಂಗ್ರೆಸ್ಸಿನಲ್ಲಿ General Secretary ಆಗಿದ್ದಾಗ. ನಿಮಗೆ ಧೈರ್ಯವಿದ್ದರೆ ಆತನನ್ನು arrest ಮಾಡಿ ಮೊದಲು. ಪೊಲೀಸರನ್ನು ಹೊಡೆಯುತ್ತಾರೆ. ಗೃಹಮಂತ್ರಿ ಕೈ ಕಟ್ಟಿ ಕುಳಿತುಕೊಳ್ಳುತ್ತಾರೆ.

(ಗೊಂದಲ)

ಶ್ರೀ ಕೆ. ಜೆ. ಜಾರ್ಜ್ : ನೀವು ಹೇಳಿದ ಹಾಗೆ ನಾವು ಮಾಡುವುದಕ್ಕೆ ಆಗುವುದಿಲ್ಲ. ನಾನು ಅದರ ಬಗ್ಗೆ ವಿವರಣೆಯನ್ನು ಕೊಡುತ್ತೇನೆ. ತಾವು ಅದನ್ನು ತಾಳ್ಮೆಯಿಂದ ಕೇಳಿ ನಂತರ ಮಾತನಾಡಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಕಾಂಗ್ರೆಸ್ ಪಕ್ಷವೇ ಅವರನ್ನು ರಕ್ಷಿಸಬೇಕೆಂದು ನಿರ್ಣಯ ಮಾಡಿದ ಹಾಗೆ ಇದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಪೊಲೀಸರನ್ನು ಹೊಡೆಯುತ್ತಿದ್ದರೂ ಗೃಹ ಮಂತ್ರಿಗಳು ಕೈಕಟ್ಟಿಕೊಂಡು ಸುಮ್ಮನೆ ಕುಳಿತಿದ್ದಾರೆ. ಪೊಲೀಸರ ಮೇಲೆ ಹಲ್ಲೆ ಮಾಡಿದರೂ ನಿಮಗೆ ನಾಚಿಕೆಯಿಲ್ಲ. ಪೊಲೀಸರಿಗೆ ರಕ್ಷಣೆ ಕೊಡುವುದಕ್ಕೆ ಆಗಿಲ್ಲ. ಅಂದಮೇಲೆ ತಾವು ಜನಸಾಮಾನ್ಯರಿಗೆ ಏನು ರಕ್ಷಣೆ ಕೊಡುತ್ತೀರಿ?

(ಗೊಂದಲ)

ಶ್ರೀ ಅಭಯ್ ಚಂದ್ರ ಜೈನ್ : ನೀವು municipality officer ಗೆ ಹೊಡೆದಿದ್ದೀರಿ. (ಗೊಂದಲ). ನಿಮ್ಮ ಹಣೆಬರಹ ಎಲ್ಲಾ ಗೊತ್ತಿದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ರಾಜ್ಯದ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ನೀವು ಸದನದ ಸಮಯವನ್ನು ಹಾಳು ಮಾಡಬೇಕೆಂದಿದ್ದೀರಿ. ಸದನವು ನಡೆಯಬಾರದೆಂದು ತಾವೇ ಅಸಹಕಾರ ಕೊಡುತ್ತಿದ್ದೀರಿ. ಸದನವನ್ನು ನಡೆಸುವುದಕ್ಕೆ ನಾವು ತಯಾರಿದ್ದರೂ ಸರ್ಕಾರ ಉತ್ತರವನ್ನು ಕೊಡುವುದಕ್ಕೆ ತಯಾರಿಲ್ಲ. ಅಪರಾಧಿಗಳನ್ನು ರಕ್ಷಣೆ ಮಾಡುವುದಕ್ಕೆ ಹೊರಟಿದ್ದೀರಿ. ಅವರನ್ನು arrest ಮಾಡುವುದಕ್ಕೆ ತಯಾರಿಲ್ಲ. ಏನಿದು ಸರ್ಕಾರ ನಿಲುವು?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಅವರು ಉತ್ತರ ಕೊಡುವುದಕ್ಕೆ ತಯಾರಿಲ್ಲವೆಂದರೆ ಹೇಗೆ? ನಾವು ಉತ್ತರವನ್ನು ಕೇಳುತ್ತಿದ್ದೇವೆ.

(ಗೊಂದಲ)

ಅಧ್ಯಕ್ಷರು : ಈಗ ಸದನವನ್ನು ಅರ್ಧ ಗಂಟೆ ಮುಂದೂಡಿ, ಪುನಃ ಸೇರಲಾಗುವುದು.

(ಸದನವನ್ನು 10 ಗಂಟೆ 46 ನಿಮಿಷದಿಂದ ಅರ್ಧಗಂಟೆಗಳ ಕಾಲ ಮುಂದೂಡಿ ಪುನಃ ಸೇರಲು ನಿಶ್ಚಯಿಸಲಾಯಿತು)

(ಸಭೆಯು ಬೆಳಿಗ್ಗೆ 11 ಗಂಟೆ 33 ನಿಮಿಷಕ್ಕೆ ಮತ್ತೆ ಸಮಾವೇಶಗೊಂಡಿತು)

(ಈ ಹಂತದಲ್ಲಿ ಬಿ.ಜೆ.ಪಿ. ಹಾಗೂ ಜೆ.ಡಿ.(ಎಸ್) ಪಕ್ಷದ ಕೆಲವು ಸದಸ್ಯರು ಬಾವಿಯಲ್ಲಿದ್ದು, ಧರಣಿ ಮಾಡುತ್ತಾ ಸರ್ಕಾರದ ವಿರುದ್ಧ ಧಿಕ್ಕಾರ ಘೋಷಣೆಗಳನ್ನು ಕೂಗುತ್ತಿದ್ದರು.)

(ಗೊಂದಲ)

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರೆ, ಪ್ರಶ್ನೋತ್ತರ ಆದ ತಕ್ಷಣ ಉತ್ತರ ನೀಡುತ್ತಾರೆ.

(ಗೊಂದಲ)

ಅಧ್ಯಕ್ಷರು : ಇದೆಲ್ಲವೂ ಯಾವುದೂ ದಾಖಲೆಗೆ ಹೋಗುವುದು ಬೇಡ.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ದಾಖಲಿಸಿರುವುದಿಲ್ಲ)

ಅಧ್ಯಕ್ಷರು : ನಾನು ಒಂದು ಹೇಳುತ್ತೇನೆ, ಪ್ರಶ್ನೋತ್ತರಕ್ಕಿಂತ ಮೊದಲು ಇದಕ್ಕೆ ಅವಕಾಶ ಕೊಟ್ಟರೆ ನಮ್ಮ ನಿಯಮಕ್ಕೆ ವಿರೋಧವಾಗಿ ಆಗುತ್ತದೆ. ಈಗ ಅವರು ಉತ್ತರ ಕೊಡಲು ತಯಾರಿದ್ದಾರೆ. ಪ್ರಶ್ನೋತ್ತರ ಆದ ನಂತರ ಉತ್ತರ ಕೊಡುತ್ತಾರೆ. ಅದರಲ್ಲೇನಿದೆ? ಪ್ರಶ್ನೋತ್ತರ ಆದ ಮೇಲೆ ಉತ್ತರ ಕೊಟ್ಟರೆ ನಿಮಗೇನು ತೊಂದರೆ?

(ಗೊಂದಲ)

ಅಧ್ಯಕ್ಷರು : ಸರ್ಕಾರದ ಪರವಾಗಿ ಏನು ಹೇಳುತ್ತೀರಿ ಹೇಳಿ.

ಶ್ರೀ ಕೆ. ಜೆ. ಜಾರ್ಜ್ : ಮಾನ್ಯ ಅಧ್ಯಕ್ಷರೆ, ಈಗ ಮೇಲ್ಮನೆಯಲ್ಲಿ ಹೋಗಿದ್ದೆ. ಅಲ್ಲಿಯೂ ಸಹ Zero Hour ನಲ್ಲಿ statement ಕೇಳಿದ್ದಾರೆ. ಮೇಲ್ಮನೆಯಲ್ಲಿ ಪ್ರಶ್ನೋತ್ತರ ಆದ ನಂತರ ಉತ್ತರ ಕೊಡಲು ಹೇಳಿದ್ದಾರೆ. ಅದೇ ರೀತಿ ಪ್ರಶ್ನೋತ್ತರ ಆದ ಮೇಲೆ ಇಲ್ಲಿಯೂ ಉತ್ತರ ಕೊಡುತ್ತೇವೆ.

ಅಧ್ಯಕ್ಷರು : ಆಯಿತು. ನಮ್ಮ ನಿಯಮದ ಪ್ರಕಾರ ಪ್ರಶ್ನೋತ್ತರ ಆದ ಮೇಲೆಯೇ ಶೂನ್ಯ ವೇಳೆ ಪ್ರಾರಂಭವಾಗುತ್ತದೆ.

(ಗೊಂದಲ)

ಅಧ್ಯಕ್ಷರು : ಈಗ ನಾನು ನಿಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ದಯವಿಟ್ಟು ಪ್ರಶ್ನೋತ್ತರ ಆಗಲಿ, ಉತ್ತರ ಕೊಡುತ್ತಾರೆ.

(ಗೊಂದಲ)

ಅಧ್ಯಕ್ಷರು : ನಾನು force ಮಾಡುವುದಕ್ಕಾಗುವುದಿಲ್ಲ. ಈಗ ಅವರು ಹೇಳಿಕೆಯನ್ನು . . . .

ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಇವರು ಏನನ್ನು? ಕೇಳುವುದಕ್ಕೆ ತಯಾರಿಲ್ಲ. ನಾವೇನು ಮಾಡುವುದಕ್ಕಾಗುತ್ತದೆ?

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ. (ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು ಎದ್ದು ನಿಂತರು.)

ಶ್ರೀ ಟಿ. ಬಿ. ಜಯಚಂದ್ರ : ಒಂದು submission. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಶೂನ್ಯ ವೇಳೆಯಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ನಿನ್ನೆ ಪ್ರಸ್ತಾಪ ಮಾಡಿದ ಸಂದರ್ಭದಲ್ಲಿ ಉತ್ತರ ಕೊಡು

ತ್ತೇವೆಂಬ ಮಾತನ್ನು ಸಹ ಹೇಳಿದ್ದೇವೆ. ಇವತ್ತು ಉತ್ತರ ಕೊಡುವುದಕ್ಕೆ ನಾವು ತಯಾರಿದ್ದು, ಉತ್ತರ ಕೊಡುತ್ತೇವೆ. ಅದಕ್ಕೆ ಮೊದಲು ನಿಯಮಗಳಿರುತ್ತವೆ.

(ಗೊಂದಲ)

ಅಧ್ಯಕ್ಷರು : ಅವರು ಏನು ಹೇಳುತ್ತಿದ್ದಾರೆ ಕೇಳಿ. ನೀವು ಹೇಳಿದ ಹಾಗೆ ಅವರು ಕೇಳಬೇಕು. ಅವರು ಹೇಳುವುದನ್ನು ನಿಮಗೆ ಕೇಳುವುದಕ್ಕಾಗುವುದಿಲ್ಲವೇನು? ಅವರು ಏನು ಹೇಳುತ್ತಾರೆಂದು ಕೇಳಿ. ಇದು dictate ಮಾಡುವುದಕ್ಕಾಗುವುದಿಲ್ಲ. ಅವರು ಹೇಳುವುದನ್ನೂ ಕೇಳಬೇಕು.

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಸದನವನ್ನು ಮುಂದೂಡುವುದಕ್ಕೆ ಎಲ್ಲಾ ತಂತ್ರಗಳನ್ನು ಮಾಡುತ್ತಿದ್ದಾರೆ. ಪ್ರಶ್ನೋತ್ತರ ಮುಗಿದ ಮೇಲೆ ಉತ್ತರ ಕೊಡುತ್ತೇವೆ. ಉತ್ತರ ಕೊಡಲು ತಯಾರಾಗಿದ್ದೇವೆ. ಆಡಳಿತ ಪಕ್ಷದಲ್ಲಿ ಕುಳಿತು ಏನು ಮಾಡಿದಿರಿ. ಈಗ ವಿರೋಧ ಪಕ್ಷದಲ್ಲಿ ಕುಳಿತು ಅದನ್ನೇ ಮಾಡಬೇಕೆಂದು ಹೊರಟಿದ್ದೀರಾ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ನಾವು ಯಾವಾಗಲೂ ಸಹಕಾರ ಕೊಟ್ಟಿದ್ದೇವೆ. ನಮ್ಮ ತಾಳ್ಮೆಯನ್ನು ಪರೀಕ್ಷೆ ಮಾಡಬಾರದು, ನಿನ್ನೆ ವಿಧಾನ ಪರಿಷತ್ ಇಡೀ ದಿವಸ ನಡದೇ ಇಲ್ಲ.

ಅಧ್ಯಕ್ಷರು : ಒಂದು ನಿಮಿಷ ಅವರು (ಆಡಳಿತ ಪಕ್ಷದವರು) ಏನು ಹೇಳುತ್ತಾರೋ ಕೇಳಿ, ಅವರು ಹೇಳುವುದನ್ನು ಕೇಳುವುದಕ್ಕೆ ನೀವು ತಯಾರಿಲ್ಲ ವೆಂದರೆ ಹೇಗೆ?

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಇವರಿಗೆ ಸಭೆ ನಡೆಸುವುದಕ್ಕೆ ಇಷ್ಟವಿಲ್ಲ, ನಮ್ಮ ನಿಲುವಿನಲ್ಲಿ ಬದಲಿಲ್ಲ. ಶೂನ್ಯವೇಳೆಯಲ್ಲಿ ಕೇಳೀರು

ವುದಕ್ಕೆ ಶೂನ್ಯವೇಳೆಯಲ್ಲೇ ಉತ್ತರವನ್ನು ಕೊಡುತ್ತೇವೆ, ಪ್ರಶ್ನೋತ್ತರ ತೆಗೆದು ಕೊಳ್ಳಿ, ಪ್ರಶ್ನೋತ್ತರ ಮುಗಿದ ಮೇಲೆ ಉತ್ತರವನ್ನು ಕೊಡುತ್ತೇವೆ.

(ಗೊಂದಲ)

ಅಧ್ಯಕ್ಷರು : ನೀವೆಲ್ಲಾ (ಆರ್. ಅಶೋಕ್) ಗೃಹ ಸಚಿವರಾಗಿ ಕೆಲಸ ಮಾಡಿದ್ದೀರಿ, ನೀವೇ ಹೀಗೆ ಹೇಳಿದರೆ ನಾನೇನು ಹೇಳಲಿ?

(ಗೊಂದಲ)

ಶ್ರೀ ಆರ್. ಅಶೋಕ್ : ಮಹಿಳೆಯರು ನಿರ್ಭೀತಿಯಿಂದ ಓಡಾಡುವುದಕ್ಕೆ ಜಾಹಿರಾತು ಕೊಟ್ಟಿದ್ದಾರೆ. ಆದರೆ ರೋಡ್ ರೋಡ್‌ನಲ್ಲಿ ಪೊಲೀಸರಿಗೆ ಹೊಡೆಯುತ್ತಿದ್ದಾರೆ. ಟ್ರಾಫಿಕ್ ಪೊಲೀಸರಿಗೆ ಹೊಡೆಯುತ್ತಾರೆ, ಪತ್ರಕರ್ತರಿಗೆ ಹೊಡೆಯುತ್ತಾರೆ. . . . .

(ಗೊಂದಲ)

ಅಧ್ಯಕ್ಷರು : ಅವರು (ಆಡಳಿತ ಪಕ್ಷದವರು) : ಏನಾದರೂ ಹೇಳಲಿ, ನೀವು ಹೇಳಿದ್ದನ್ನು ಕೇಳಬೇಕು ಅವರು ಹೇಳಿದ್ದನ್ನು ನೀವು ಕೇಳುವುದಕ್ಕಾಗುವು ದಿಲ್ಲವೇ? ಈ ಸದನವಿರುವುದೇ ಚರ್ಚೆ ಮಾಡುವುದಕ್ಕೆ ಪರಸ್ಪರ ಚರ್ಚೆ ಮಾಡಿ ಪರಿಹಾರವನ್ನು ಕಂಡುಹಿಡಿಯಬೇಕು, ಹೀಗೆ ನಡೆದುಕೊಳ್ಳುವುದರಿಂದ ಸದನದ ಕಲಾಪವನ್ನು ಹಾಳು ಮಾಡುತ್ತಿದ್ದೀರಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಸ್ಪೀಕರ್ ಆರ್ಡರ್ ಫೈನಲ್, ಎಲ್ಲಾ ನಿಯಮಗಳನ್ನು ಮೀರಿ ಸ್ಪೀಕರ್ ಅವರು ರೂಲಿಂಗ್ ಕೊಟ್ಟಿದ್ದಾರೆ. ಈ ರೂಲ್ಸ್ ಎಲ್ಲಾ ಬಿಡಿ, ಎಲ್ಲಾ ನಿಯಮವಿದ್ದರೂ ಸ್ಪೀಕರ್ ಅವರು ರೂಲಿಂಗ್ ಕೊಟ್ಟಿ ದ್ದಾರೆ.

(ಗೊಂದಲ)

ಅಧ್ಯಕ್ಷರು : ಈ ಸದನದ ಗೌರವನ್ನು ಹಾಳು ಮಾಡುತ್ತಿದ್ದೀರಿ.

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ : ನೀವು ಶೂನ್ಯವೇಳೆ ಕೊಟ್ಟುಬಿಟ್ಟು, ಪ್ರಶ್ನೋತ್ತರವನ್ನು ಮುಂದಕ್ಕೆ ಹಾಕಿ ಎಂದರೆ ಯಾವ ನ್ಯಾಯ? ಸದನಕ್ಕೆ ಗೌರವ ಕೊಡುವುದು ಗೊತ್ತಿಲ್ಲ, ಸದನಕ್ಕೆ ಗೌರವ ಕೊಡುವುದನ್ನು ಮೊದಲು ಕಲಿತುಕೊಳ್ಳಿ. ಯಾವ ಸದಸ್ಯರನ್ನೂ ರಕ್ಷಣೆ ಮಾಡುವ ಪ್ರಶ್ನೆ ಇಲ್ಲ.

(ಗೊಂದಲ)

ಅಧ್ಯಕ್ಷರು : ವಿಷಯ ಇಷ್ಟೆ, ಅವರು ಪ್ರಶ್ನೋತ್ತರವಾದ ಮೇಲೆ ಉತ್ತರ ಕೊಡುತ್ತೇವೆಂದು ಹೇಳುತ್ತಿದ್ದಾರಲ್ಲ, ಏತಕ್ಕೆ ಪ್ರಶ್ನೋತ್ತರವನ್ನು ತೆಗೆದುಕೊಳ್ಳಬಾರದು?

(ಗೊಂದಲ)

(ಭಾರತೀಯ ಜನತಾ ಪಕ್ಷದ ಸದಸ್ಯರು ಬಾವಿಯಲ್ಲಿ ಧಿಕ್ಕಾರ ಕೂಗುತ್ತಿದ್ದರು)

ಶ್ರೀ ಜಗದೀಶ್ ಶೆಟ್ಟರ್ : ಪೊಲೀಸರ ಮೇಲೆ ಕೈ ಎತ್ತಿದ ಶಾಸಕ ನಾಪತ್ತೆ, ಸೋಮಶೇಖರ ಗೌಡ ನಾಪತ್ತೆ, ಕಾಶಪ್ಪನವರ್ ನಾಪತ್ತೆ. (ಎಲ್ಲಿದ್ದಾರೆ ಅವರು?)

(ಗೊಂದಲ)

ಅಧ್ಯಕ್ಷರು : ನೋಡಿ, ಈ ಸದನದ ಸಮಯವನ್ನು ವ್ಯರ್ಥ ಮಾಡುತ್ತಿದ್ದೀರಿ, ಇದರಿಂದ ಏನೂ ಪುರುಷಾರ್ಥವಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಅವರಿಗೆ ಪುರುಷಾರ್ಥವಿಲ್ಲ, ಈಗ 12.00 ಗಂಟೆಯಾಗಿದೆ, ಬೆಳಿಗ್ಗೆಯೇ ಹೇಳಿಕೆ ಕೊಟ್ಟಿದ್ದರೆ, ಇಷ್ಟೊತ್ತಿಗೆ ಮುಗಿದು ಹೋಗುತ್ತಿತ್ತು. ಅದು ಅವರಿಗೆ ಬೇಕಾಗಿಲ್ಲ. ಬಹುಶಃ ಕೋರ್ಟಿಗೆ ಬೇಲ್ ಅಪ್ಲಿಕೇಷನ್ ಕೊಟ್ಟಿದ್ದಾರೆ. ಬೇಲ್ ಆಗುವವರೆಗೆ ಅವರು ಉತ್ತರ ಕೊಡುವುದಿಲ್ಲ. ಕೊನೆಯ ಪಕ್ಷ ಕಾಶಪ್ಪನವರ್ ಅವರನ್ನು ಹೋಗಿ ಅರೆಸ್ಟ್ ಮಾಡಬೇಕು.

(ಗೊಂದಲ)

ಅಧ್ಯಕ್ಷರು : ಅವರು ಉತ್ತರವನ್ನು ಪ್ರಶ್ನೋತ್ತರ ವೇಳೆ ನಂತರ ಕೊಡುತ್ತೇವೆಂದು ಹೇಳುತ್ತಾರೆ. ಆದರೆ ನೀವು ಹೀಗೆ ಹೇಳುತ್ತಿದ್ದೀರಿ, ನಾನು ರೂಲ್ಸ್ ಪ್ರಕಾರ ಹೋಗಬೇಕಾಗುತ್ತದೆ, ರೂಲ್ಸ್ ಪ್ರಕಾರ ಏನಿದೆ?

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ತಾವು ಇವತ್ತು ಬೆಳಿಗ್ಗೆ ಹೇಳಿಕೆ ಕೊಡಲೆಂದು ರೂಲಿಂಗ್ ಕೊಟ್ಟಿದ್ದೀರಿ, ಸ್ಪೀಕರ್ ಅವರಿಗೆ ನಿಯಮ ಮೀರಿ ರೂಲಿಂಗ್ ಕೊಡುವುದಕ್ಕೆ ಅಧಿಕಾರವಿದೆ, ತಾವು ರೂಲಿಂಗ್ ಕೊಟ್ಟಿದ್ದೀರಿ, ಆ ಪ್ರಕಾರ ಸರ್ಕಾರ ನಡೆದುಕೊಳ್ಳಬೇಕು, ಸರ್ಕಾರ ಆ ರೀತಿ ನಡೆದುಕೊಳ್ಳಲು ತಯಾರಿಲ್ಲವೆಂದರೆ ಹೇಗೆ? ನಿಮ್ಮ ಆಜ್ಞೆಯನ್ನು ಉಲ್ಲಂಘನೆ ಮಾಡುತ್ತಿದ್ದಾರೆ, ನಿಮ್ಮ ಆಜ್ಞೆಗೂ ಗೌರವವಿಲ್ಲ.

ಅಧ್ಯಕ್ಷರು : ಆ ನಿಯಮ ಹೇಳಿದ ಮೇಲೆ ಅದರ ಪ್ರಕಾರ ನಾವು ಹೋಗಬೇಕಾಗುತ್ತದೆ. ನಾನು ಇನ್ನು ಮೇಲೆ ಬಹಳ strict ಆಗಿ ಇರಬೇಕಾಗುತ್ತದೆ.

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ನಾನು ಈ ಸದನದಲ್ಲಿ 30 ವರ್ಷಗಳಿಂದ ಇದ್ದೇನೆ, ನೀವೂ ಕೂಡ 1972 ರಿಂದ ಇದ್ದೀರಿ. ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪ ಮಾಡಿ, ಅದಕ್ಕೆ ಈಗಲೇ ಉತ್ತರ ಕೊಡಬೇಕೆಂದು ಒತ್ತಾಯ ಮಾಡುತ್ತಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಮುಖ್ಯಮಂತ್ರಿಗಳೆ, ಪದೇ ಪದೇ ಅದನ್ನು ಹೇಳುವುದಕ್ಕೆ ಹೋಗಬೇಡಿ.

ಶ್ರೀ ಸಿದ್ಧರಾಮಯ್ಯ : ಜಗದೀಶ್ ಶೆಟ್ಟರ್ ಅವರೆ, ನೀವು ಆಮೇಲೆ ಮಾತನಾಡಿ, ಕುಳಿತುಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್ : ನಾನು ಕುಳಿತುಕೊಳ್ಳುವುದಿಲ್ಲ. We are under protest.

ಶ್ರೀ ಸಿದ್ಧರಾಮಯ್ಯ : ನಿಂತುಕೊಳ್ಳಿ ನನ್ನದೇನಿಲ್ಲ, ನಾನು ಮಾತ ನಾಡುವಾಗ ನೀವು ಮಾತನಾಡಬೇಡಿ ಅಷ್ಟೆ.

ಅಧ್ಯಕ್ಷರು : ನೀವು (ಜಗದೀಶ್ ಶೆಟ್ಟರ್) ಈ ಸ್ಥಾನದಲ್ಲಿ ಕುಳಿತು ಕೆಲಸ ಮಾಡಿದವರು ನೀವೇ ಹೀಗೆ ನಡೆದುಕೊಂಡರೆ ಹೇಗೆ?

ಶ್ರೀ ಸಿದ್ಧರಾಮಯ್ಯ : ಜಗದೀಶ್ ಶೆಟ್ಟರ್ ಬಹಳ ವರ್ಷಗಳಿಂದ ಈ ಸದನದಲ್ಲಿದ್ದಾರೆ, ನಾನೂ ಕೂಡ ಬಹಳ ವರ್ಷಗಳಿಂದ ಇದ್ದೇನೆ. ಅದು Adjournment Motion ಅಲ್ಲ, ಶೂನ್ಯ ವೇಳೆಯಲ್ಲಿ ಪ್ರಸ್ತಾಪಕ್ಕೆ ತಂದಿರತಕ್ಕಂತಹ ವಿಚಾರ. ಆ ವಿಷಯವನ್ನು ನೀವು ಪ್ರಶ್ನೋತ್ತರವನ್ನು ರದ್ದುಗೊಳಿಸಿ ಉತ್ತರ ಕೊಡಿ ಎಂದು ಹೇಳತಕ್ಕಂಥದ್ದು ಇದೆಯಲ್ಲ ಇದು ಕರ್ನಾಟಕದ ವಿಧಾನ ಸಭೆ ಇತಿಹಾಸದಲ್ಲಿ ಯಾವಾಗಲೂ ನಡೆದಿಲ್ಲ. ನಾವೇ ನಿಯಮಾವಳಿಗಳನ್ನು ಮಾಡಿಕೊಂಡಿದ್ದೇವೆ. ಯಾವ ನಿಯಮಾವಳಿ ಅಡಿಯಲ್ಲಿ ಇದು ಇದೆ? ಶೂನ್ಯ ವೇಳೆಯಲ್ಲಿ ಎತ್ತಿರುವುದಕ್ಕೆ Question Hour ಅನ್ನು suspend ಮಾಡಿ ಉತ್ತರ ಕೊಡಿ ಎನ್ನತಕ್ಕಂಥದ್ದು ಯಾವ ನಿಯಮದಲ್ಲಿದೆ? ನಾನಂತೂ ನೋಡಿಲ್ಲ. 30 ವರ್ಷಗಳಿಂದ ನೋಡುತ್ತಿದ್ದೇನೆ. ಆ ತರಹದ್ದು ಎಲ್ಲಿಯೂ ನೋಡಿಲ್ಲ. ಏನಾದರೂ ನೀವು ಈ ತರಹ ಅವಕಾಶ ಮಾಡಿ ಕೊಟ್ಟರೆ, it is going to be a dangerous precedent. It is going to be a bad precedent. ಹಾಗಲ್ಲಾ ಮಾಡುವುದಕ್ಕೆ ಬರುವುದಿಲ್ಲ. ನಿಮ್ಮಲ್ಲಿ ಅನೇಕ ಜನ ಬಹಳ ವರ್ಷಗಳಿಂದ ಇಲ್ಲಿರ ತಕ್ಕಂಥವರು. ಅಸೆಂಬ್ಲಿಯಲ್ಲಿ ಬೇಕಾದಷ್ಟು ನಡೆದಿದೆ. Upper House ನಲ್ಲಿ ನಿಮ್ಮ ಪಕ್ಷದವರೇ Question Hour ಆದ ಮೇಲೆ ಉತ್ತರ ಕೊಡಿ ಎಂದು ಹೋಗಿ ಕುಳಿತುಕೊಂಡಿದ್ದಾರೆ. Blue film ನೋಡಿದ ಘಟನೆಗಳೂ ನಡೆದಿವೆ ಇಲ್ಲಿ, ಮಂತ್ರಿಗಳು ರೇಪ್ ಮಾಡಿರತಕ್ಕಂತಹ ಘಟನೆಗಳು ನಡೆದಿವೆ. MLA ಹೆಂಡತಿ ಇವತ್ತಿನವರೆಗೂ ಸಿಗದೇ ಇರತಕ್ಕಂತಹ ಘಟನೆಗಳೂ ನಡೆದಿವೆ. ನಿಮ್ಮ ಉಡುಪಿ MLA ಕೇಸ್ ಏನಾಯಿತು? ನಿಮ್ಮ ಹಾಲಪ್ಪನವರದು ಏನಾಯಿತು?

ಶ್ರೀ ಜಗದೀಶ್ ಶೆಟ್ಟರ್ : ರಾಜೀನಾಮೆ ಕೊಡಿಸಿದೆವಲ್ಲಾ ಯಾರ ತಪ್ಪಾಗಿದೆ ಅವರಿಗೆ ಶಿಕ್ಷೆ ಕೊಡಿಸಿ,

ಶ್ರೀ ಸಿದ್ಧರಾಮಯ್ಯ : ರಾಜೀನಾಮೆ ಕೊಟ್ಟರಂತೆ, ನಿಮಗೆ ನಾಚಿಕೆ ಯಾಗಬೇಕು! ಬಹಳ ದೊಡ್ಡದಾಗಿ ಹೇಳುವುದಕ್ಕೆ ಬಂದು ಬಿಟ್ಟಿದ್ದೀರಿ ಇಲ್ಲಿ.

ಶ್ರೀ ಜಗದೀಶ್ ಶೆಟ್ಟರ್ : ನಿಮ್ಮ ಹಾಗೆ ಅವರಿಗೆ ರಕ್ಷಣೆ ಕೊಡಲಿಲ್ಲ.

ಶ್ರೀ ಸಿದ್ಧರಾಮಯ್ಯ : ನಾನು ಬಹಳ ವರ್ಷಗಳಿಂದ ನೋಡಿದ್ದೇನೆ. ನೀವು ನೋಡಿದ್ದೀರಿ. ಸದನ ಚೆನ್ನಾಗಿ ನಡೆಯುತ್ತಿದೆ. ವಿಷಯದ ಮೇಲೆ ಚರ್ಚೆ ನಡೆಯುತ್ತಿದೆ, ನಿಮಗೆ ಅಸೆಂಬ್ಲಿ ನಡೆಸುವುದಕ್ಕೆ ಇಷ್ಟವಿಲ್ಲ. ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಇಷ್ಟವಿಲ್ಲ. ಪ್ರಸ್ತಾಪ ಮಾಡುವುದಕ್ಕೆ ಯಾವುದೇ ವಿಷಯ ಇಲ್ಲ. ಯಾವುದೋ ಒಂದು ಕಂಪ್ಲೇಂಟ್ ಆಗಿದೆ, ಆ ಕಂಪ್ಲೇಂಟ್ ಬಗ್ಗೆ ಇಲ್ಲಿ ಬಂದು ಚರ್ಚೆ ಮಾಡಿ ಅಸೆಂಬ್ಲಿ ಸಮಯವನ್ನೆಲ್ಲಾ ಹಾಳು ಮಾಡತಕ್ಕಂತಹ ಕೆಲಸ ಮಾಡುತ್ತಿದ್ದೀರಿ. ನಾವು ಉತ್ತರ ಕೊಡುವುದಕ್ಕೆ ತಯಾರಾಗಿದ್ದೇವೆ. ಇವತ್ತೇ ಉತ್ತರ ಕೊಡುತ್ತೇವೆಂದು ಹೇಳಿದ್ದೇವೆ. He is ready with reply. Question Hour ಆದ ಮೇಲೆ ಉತ್ತರ ಕೊಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ಬೆಳಿಗ್ಗೆ ಉತ್ತರ ಕೊಡುತ್ತೇನೆಂದು ನೆನ್ನೆ ನೀವು ಪ್ರಾಮಿಸ್ ಮಾಡಿದ್ದಿರಿ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ನಾನು ನಿಮ್ಮನ್ನು ಅತ್ಯಂತ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. Question Hour ಅನ್ನು suspend ಮಾಡಿ ಉತ್ತರ ಕೊಡತಕ್ಕಂಥದ್ದಕ್ಕೆ ಅವಕಾಶ ಮಾಡಿ ಕೊಟ್ಟರೆ ಈ ಸದನದಲ್ಲಿ ತಪ್ಪು ಸಂಪ್ರದಾಯವನ್ನು ಹಾಕಿದ ಹಾಗಾಗುತ್ತದೆ. ಆದ್ದರಿಂದ ಹಾಗೆ ಮಾಡಕೂಡದು. ಯಾವ ಕಾರಣಕ್ಕೂ ಮಾಡಕೂಡದು. It is going to be a bad precedent. ಇವರು ಈ ರೀತಿ ಸದನ ನಡೆಯುವುದಕ್ಕೆ ಬಿಡದೆ ಇರುವುದು ಪ್ರಜಾಪ್ರಭುತ್ವದ ವಿರೋಧಿ ನೀತಿ ಇದು. Parliamentary system ಗೆ ವಿರೋಧವಾಗಿರತಕ್ಕಂಥದ್ದು. ಇದನ್ನು ನಾವು ಒಪ್ಪುವುದಕ್ಕೆ ತಯಾರಾಗಿಲ್ಲ.

ಸರ್ಕಾರ ಉತ್ತರ ಕೊಡುವುದಕ್ಕೆ ತಯಾರಾಗಿದೆ. Question Hour ತೆಗೆದುಕೊಳ್ಳಿ. ಅದಾದ ಮೇಲೆ ಉತ್ತರ ಕೊಡುವುದಕ್ಕೆ ತಯಾರಾಗಿದ್ದೇವೆ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು specific ಆಗಿ ಹೇಳಿದ್ದಾರೆ. ಕೆಟ್ಟ ಸಂಪ್ರದಾಯವನ್ನು ಮಾಡುವುದಕ್ಕೆ ತಯಾರಿಲ್ಲ.

(ಗೊಂದಲ)

ಶ್ರೀ ಸಿದ್ಧರಾಮಯ್ಯ : ಪೊಲೀಸ್ ಯೂನಿಫಾರಂ ನಲ್ಲಿ ಪಿಸ್ತೂಲ್ ಹಿಡಿದುಕೊಂಡು ಅಸೆಂಬ್ಲಿ ಒಳಗಡೆ ಬಿಟ್ಟಿರತಕ್ಕಂಥದ್ದು, ಯಾವಾಗಲಾದರೂ ನಡೆದಿತ್ತಾ? ನಾಚಿಕೆ ಆಗಲ್ಲವಾ ನಿಮಗೆ?

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರೆ, ಅವರು ತಮ್ಮ ನಿಲುವನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಪ್ರಶ್ನೋತ್ತರಕ್ಕಿಂತ ಮುಂಚಿತವಾಗಿ ಅವಕಾಶ ಮಾಡಿ ಕೊಟ್ಟರೆ ಒಂದು ಕೆಟ್ಟ ಸಂಪ್ರದಾಯವಾಗುತ್ತದೆ ಎನ್ನುವುದು ಸ್ಪಷ್ಟವಾಗಿದೆ, ನಾನು ಅದಕ್ಕೆ ಒಪ್ಪುತ್ತೇನೆ. ದಯವಿಟ್ಟು ಪ್ರಶ್ನೋತ್ತರಕ್ಕೆ ಅವಕಾಶ ಮಾಡಿ ಕೊಡಿ. ಆ ನಂತರ ಅವರು ಹೇಳಿಕೆ ಕೊಡುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ : ಅವರಿಗೆ ಒಂದು ಅವಕಾಶ ಕೊಟ್ಟಿದ್ದೇವೆ. ಆದರೂ ಸಹಿತ ಅವರಿಗೆ ಉತ್ತರ ಕೊಡುವುದಕ್ಕೆ guts ಇಲ್ಲ. ಇದನ್ನು ಅವಾಯ್ಡ್ ಮಾಡುತ್ತಿದ್ದಾರೆ. ಕಾಶಪ್ಪನವರ್‌ರವರಿಗೆ ರಕ್ಷಣೆ ಮಾಡುತ್ತಿದ್ದಾರೆ. ಅಪರಾಧಿಗಳನ್ನು ರಕ್ಷಣೆ ಮಾಡುತ್ತಿದ್ದಾರೆ.

ಶ್ರೀ ಸಿದ್ಧರಾಮಯ್ಯ : ನೀವೇನೂ ಹೇಳೀರಲಿಲ್ಲ. 30 ದಿನ ನಾವೇ ಅಸೆಂಬ್ಲಿ ಕರೆದಿರುವುದು. ಐದು ವರ್ಷದಲ್ಲಿ ನಿಮಗೆ ಒಂದು ದಿನ ಡಿಮ್ಯಾಂಡ್ ಮೇಲೆ ಚರ್ಚೆ ಮಾಡುವುದಕ್ಕಾಗಲಿಲ್ಲ. ಐದು ವರ್ಷದಲ್ಲಿ ಒಂದು ವರ್ಷವೂ ಡಿಮ್ಯಾಂಡ್ ಮೇಲೆ ಚರ್ಚೆ ಮಾಡಲಿಲ್ಲ . . . .

(ಗೊಂದಲ)

ಅಧ್ಯಕ್ಷರು : ಈಗ ನಾನು ಪ್ರಶ್ನೋತ್ತರ ಪ್ರಾರಂಭ ಮಾಡುತ್ತಿದ್ದೇನೆ.